ವಿ.ಎಮ್.ಎಸ್.ಆರ್.ವಸ್ತ್ರದ ಕಲಾ,ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ ಹುನಗುಂದ

ತಾ॥ ಹುನಗುಂದ ಜಿ॥ ಬಾಗಲಕೋಟ



# ಜಾಂಬೂರಿಯ ವರದಿ

- ಹೆಸರು: ಬಸವಪ್ರಭು.ಮ.ಗಾಣಿಗೇರ
- ವರ್ಗ: ಬಿ.ಎ ತನೇ ಸೆಮಿಸ್ಟರ
- ಮಾಧ್ಯಮ: ಕಲಾ
- ಹಾಜರಿ ಸಂಖ್ಯೆ: 08

ಸಂಚಾಲಕರ ಸಹಿ.



# Wellcome

# to

# Culture Jamboree

# ಅಂತರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ

ನಾವು ಜಾಂಬೂರಿಯನ್ನು ನೋಡಲು ಹುನಗುಂದದಿಂದ 20ನೇ ತಾರೀಖಿನಂದು ಬೆಳ್ಳಿಗೆ 8.30ಕ್ಕೆ ಬಿಟ್ಟೆವು. ನಾವು ಅಮೀನಗಡ, ಗುಡೂರು, ಕವಿಗಳ ನಾಡು ಗದಗ, ಕಲಘಟ್ಟಗಿ, ಯಲ್ಲಾಪುರ, ಕುಮಟಾ, ಭಟ್ಕಳ, ಉಡುಪಿಯ ಮಾರ್ಗವಾಗಿ ಮೂಡಬಿದರಿಯ ಆಳ್ವಾಸ ಸಂಸ್ಥೆಯ ಆವರಣಕ್ಕೆ ರಾತ್ರಿ 12.30 ಕ್ಕೆ ಬಂದೆವು. ಮಾರ್ಗದ ಮಧ್ಯ ಕಲಘಟ್ಟಗಿಯಲ್ಲಿ ಉಪಹಾರ ಮಾಡಿದೆವು. ನಮ್ಮ ಕಾಲೇಜಿನಿಂದ ನಾವು 6 ಜನ ರೋವರ್ಸ್ ಹಾಗೂ 5 ಜನ ರೇಂಜರ ಜೊತೆ ನಮ್ಮ ಕಾಲೇಜಿನ ಸ್ಕೌಟ ಮತ್ತು ಗೈಡ್ಸನ ಸಂಚಾಲಕರು ಹಾಗೂ ನೆಚ್ಚಿನ ಪ್ರಾಧ್ಯಾಪಕರುಗಳಾದ ಎಸ್.ಆರ್.ನಾಗಣ್ಣವರ ಮತ್ತು ಶ್ರೀಮತಿ ಅಮಲಿಕೋಪ ಪ್ರಾಧ್ಯಾಪಕರು ನಮ್ಮ ಜೊತೆ ಬಂದಿದ್ದರು. ನಾವು ಆಳ್ವಾಸ ಪದವಿ ಪೂರ್ವ ಕಾಲೇಜಿನಲ್ಲಿ ತಂಗಿದ್ದೆವು.

ನಾವು ಜಾಂಬೂರಿಯಲ್ಲಿ 6 ದಿನ ಕಳೆದೆವು, ಆ 6 ದಿನಗಳಲ್ಲಿ ನಾವು ವಿವಿಧ ಚಟುವಟಿಕೆಗಳನ್ನು ಮಾಡಿದೆವು ಅವುಗಳ ವಿವರಣೆ ಈ ಕೆಳಗಿನಂತಿವೆ.

1) **21-12-2022 :** ಈ ದಿನದಂದು ನಾವು ಬೆಳ್ಳಗಿನ ಉಪಹಾರ ಮುಗಿಸಿಕೊಂಡು ಆಳ್ವಾಸ ಆಂಗ್ಲ ಮಾಧ್ಯಮ ಶಾಲೆಗೆ ಬಂದೆವು. ನಾವು ಅಲ್ಲಿ ಜಾಂಬೂರಿ ಕಿಟ್‌ನ್ನು ಪಡೆದೆವು. ಈ ದಿನದಂದು ಜಾಂಬೂರಿಯ ಉದ್ಘಾಟನಾ ಸಮಾರಂಭವಿತ್ತು ಈ ಸಮಾರಂಭವನ್ನು ಕರ್ನಾಟಕದ ರಾಜ್ಯಪಾಲರಾದ ಥಾವರಚಂದ ಗೆಹ್ಲೋಟರವರು ಉದ್ಘಾಟನೆ ಮಾಡಿದರು ಮತ್ತು ಈ ಕಾರ್ಯಕ್ರಮದಲ್ಲಿ ನಳಿನಕುಮಾರ ಕಟೀಲ, ವಿರೇಂದ್ರ ಹೆಗಡೆ, ರಾಜ್ಯ ಸ್ಕೌಟ ಮತ್ತು ಗೈಡ್ಸನ ಕಾರ್ಯದರ್ಶಿಗಳಾದ ಪಿ.ಜಿ.ಆರ್ ಸಿಂಧೆ ಮತ್ತು ಆಳ್ವಾಸ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಮೋಹನ ಆಳ್ವಾರವರು ಉಪಸ್ಥಿತರಿದ್ದರು. ಈ ಉದ್ಘಾಟನೆಯ ನಂತರ ಹಲವಾರು ಸಾಂಸ್ಕೃತಿಕ ತಂಡಗಳ ಪಥ ಸಂಚಲನ ನಡೆಯಿತು.
2) **22-12-2022 :** ಈ ದಿನದಂದು ನಾವು ಉಪಹಾರ ಮುಗಿಸಿಕೊಂಡು 8-15 ಕ್ಕೆ ನಾವು ಸ್ವಚ್ಛತಾ ಕಾರ್ಯಕ್ರಮಕ್ಕೆಂದು ಸಮೀಪದ ಮುಲ್ಕಿಗೆ ಹೋದೆವು ಅಲ್ಲಿ ನಾವು 2 ಗಂಟೆಗಳ ಕಾಲ ಕೆಲಸ ಮಾಡಿದೆವು ಹಾಗೂ ಮುಲ್ಕಿಯ ಪುರಸಭೆಯಲ್ಲಿ ಸ್ವಲ್ಪ ಉಪಹಾರ ಮಾಡಿ ಸಂಸ್ಥೆಯ ವಾಹನದಲ್ಲಿ ಮೂಡಬಿದರಿಗೆ ಬಂದೆವು ಬಂದು ಕೃಷಿ ಮೇಳ ಮತ್ತು ವಿಜ್ಞಾನ ಮೇಳವನ್ನು ವಿಕ್ಷಣೆ ಮಾಡಿದೆವು.
3) **23-12-2022 :** ಈ ದಿನದಂದು ನಾವು ಬೆಳಗಿನ ಉಪಹಾರ ಮಾಡಿ, ಮತ್ತೆ ನಾವು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏಕ ಭಾರತ ಶ್ರೇಷ್ಠ ಭಾರತ ಬ್ಯಾಡ್ಜನ್ನು ಪಡೆದೆವು ಹಾಗೂ ಮಧ್ಯಾಹ್ನದ ಉಪಹಾರದ ನಂತರ ಕಾಂತಾರ ಚಿತ್ರವನ್ನು ನೋಡಿದೆವು.
4) **24-12-2022 :** ಈ ದಿನದಂದು ನಾವು ಹೈಕ್‌ಗೆ ಹೋದೆವು. ಹೈಕನಲ್ಲಿ ನಾವು 2.5 ಕಿಮೀ ದೂರದಲ್ಲಿನ ಪುತ್ತಿಗೆ ಮಹತೋಭಾರ ಶ್ರೀ ಸೋಮನಾಥೇಶ್ವರ ದೇವಸ್ಥಾನಕ್ಕೆ ಹೊದೆವು, ಮಾರ್ಗ ಮಧ್ಯದಲ್ಲಿ ವಿವಿಧ ಮರ ಗಿಡಗಳನ್ನು ನೋಡಿದೆವು. ದಾರಿಯಲ್ಲಿ ನಾವು ಸ್ಕೌಟನ ಜಯಕಾರ ಹಾಕಿದೆವು. ದೇವಸ್ಥಾನದಲ್ಲಿ ಮಜ್ಜಿಗೆಯನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸಿ, ಅಲ್ಲಿ ನಾವು ಹೈಕಿನ ಬ್ಯಾಡ್ಜನ್ನು ಪಡೆದೆವು. ಹೈಕ ಮುಗಿಸಿಕೊಂಡು ನಾವು ಸಾಹಸ ಕ್ರೀಡೆಯನ್ನು ಆಡಲು ಹೊದೆವು. ಅಲ್ಲಿ ವಿವಿಧ ರೀತಿಯ ಆಟಗಳಿದ್ದವು ಅವುಗಳಲ್ಲಿ ಕೇಲವನ್ನೆ ಆಡಿ ಮುಂದೆ ಸಂಜೆ 6.30ಕ್ಕೆ ಆಳ್ವಾಸ ಕಾಲೇಜಿನ ಮುಖ್ಯ ವೇದಿಕೆಗೆ ಬಂದೆವು. ಅಲ್ಲಿ ನಾವು ಕರ್ನಾಟಕದ ಪ್ರಸಿದ್ಧ ಗಾಯಕರಾದ ವಿಜಯಪ್ರಕಾಶರವರ ಸಂಗೀತ ಗಾಯನ ಕಾರ್ಯಕ್ರಮವಿತ್ತು. ಆ ಕಾರ್ಯಕ್ರಮವನ್ನು ಆನಂದಿಸಿದೆವು.
5) **25-12-2022 :** ಈ ದಿನದಂದು ನಾವು ಬೆಳಗ್ಗೆ ನಾವು ತಂಗಿದ್ದ ಕಾಲೇಜಿನ ಹತ್ತಿರದ ವೇದಿಕೆಯಲ್ಲಿ ನಾವು ಸುಗ್ಗಿಯ ನೃತ್ಯವನ್ನು ಮತ್ತು ಹೇಳವರ ಪದದ ಅಭಿನಯವನ್ನು ಮಾಡಿದೆವು. ನಂತರ ನಾವು ಮಧ್ಯಾಹ್ನದ ಉಪಹಾರವನ್ನು ಮಾಡಿ ಸಾಹಸ ಕ್ರೀಡೆಯನ್ನು ಆಡಲು ಹೋದೆವು. ಅಲ್ಲಿ ಆಡಿ ಸಾಹಸ ಕ್ರೀಡೆಯ ಬ್ಯಾಡ್ಜನ್ನು


ಪಡೆದುಕೊಂಡೆವು. ಅದೇ ದಿನ ಸಂಜೆ ಸಾಮಾಜಿಕ ಜಾಲತಾಣದಲ್ಲಿ ಹರ ಹರ ಶಂಭೋ ಹಾಡಿನಿಂದ ಪ್ರಸಿದ್ಧಿ ಪಡೆದ ಗಾಯಕಿಯಾದ ಅಭಿಲಿಪ್ಸಾ ಪಾಂಡಾರವರ ಗಾಯನವಿತ್ತು. ಗಾಯನ ನಂತರ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರು ಬಂದಿದ್ದರು.

6) 26-12-2022 : ಈ ದಿನದಂದು ಬೆಳಗ್ಗೆ ನಾನು ಎಸ್‌ಡಿಜಿ ಬ್ಯಾಡ್ಜನ್ನು ಮತ್ತು ಕೈಗಾರಿಕಾ ಬ್ಯಾಡ್ಜನ್ನು ಕಾರಣಾಂತರಗಳಿಂದ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಅದೇ ದಿನ ನಾವು ಒಂದು ಕಿರು ಪ್ರವಾಸವನ್ನು ಕೈಗೊಂಡೆವು. ನಾವು ಖಾಸಗಿ ವಾಹನವನ್ನು ಬಾಡಿಗೆ ಮಾಡಿಕೊಂಡು ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನ, ಜಾರಿಗೆಕಟ್ಟೆ ಕೊರಗಜ್ಜನ ದೇವಸ್ಥಾನ, ಉಡುಪಿ ಕೃಷ್ಣ ಮಠಕ್ಕೆ ಹೋದೆವು ಮತ್ತು ಅಲ್ಲಿಯೆ ಅನ್ನಪ್ರಸಾದ ಮಾಡಿದೆವು ಮುಂದೆ ನಾವು ಮಲ್ಪೆ ಕಡಲ ತೀರಕ್ಕೆ ಹೋದೆವು ಅಲ್ಲಿ ಸ್ವಲ್ಪ ಸಮಯ ಕಡಲ ತೀರದಲ್ಲಿ ಆಟವಾಡಿದೆವು. ಸಂಜೆ ಪ್ರವಾಸವನ್ನು ಮುಗಿಸಿಕೊಂಡು ಬಂದೆವು. ಬಂದು ನನ್ನ ತಂಗಿಗೆ ಕೆಲವು ವಸ್ತುಗಳನ್ನು ತೆಗೆದುಕೊಂಡೆನು.

7) 27-12-2022 : ಈ ದಿನವು ಜಾಂಬೂರಿಯ ಕೊನೆಯ ದಿನವಾಗಿತ್ತು. ಈ ದಿನ ನಾವು ಜಿಲ್ಲಾ ಸ್ಕೌಟ ಆಯುಕ್ತರಾದ ಚೋಗಲೆಯವರೊಂದಿಗೆ ಫೋಟೊವನ್ನು ತೆಗೆಸಿಕೊಂಡೆವು. ನಂತರ ನಾವು ಊರಿಗೆ ಹೋಗಲು ಸಿದ್ಧತೆಯನ್ನು ಮಾಡಿಕೊಂಡ ಮೇಲೆ ಮಧ್ಯಾಹ್ನದ ಊಟವನ್ನು ಮಾಡಿಕೊಂಡು ನಾನು ಮತ್ತು ನನ್ನ ಸ್ನೇಹಿತ ಮಂಜುನಾಥನೊಂದಿಗೆ ಸಾವಿರ ಕಂಬದ ಬಸದಿಯನ್ನು ನೋಡಲು ಹೋದೆವು. ಈ ಬಸದಿ ಆಳ್ವಾಸ ಕಾಲೇಜಿನಿಂದ 3 ಕಿಮೀ ದೂರದಲ್ಲಿತ್ತು ಆದ ಕಾರಣ ಆಟೋ ಮಾಡಿಕೊಂಡು ಹೋದೆವು. ಈ ಬಸದಿಯನ್ನು ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ರಾಜನಾದ ಪ್ರೌಢದೇವರಾಯನ ಕಾಲದ ಬಸದಿಯಾಗಿದ್ದು ಇದನ್ನು 1430ರಲ್ಲಿ ನಿರ್ಮಿಸಲಾಗಿದೆ. ಈ ಬಸದಿಯು ಸಾವಿರ ಕಂಬಗಳಿಂದ ಕೂಡಿದ ಬಸದಿಯಾಗಿದ್ದು ಆದ ಕಾರಣ ಇದಕ್ಕೆ ಸಾವಿರ ಕಂಬದ ಬಸದಿ ಎಂದು ಕರೆಯುತ್ತಾರೆ. ಈ ಬಸದಿ ನೋಡಲು ತುಂಬಾ ಚೆನ್ನಾಗಿದೆ. ಬಸದಿಯ ಮಧ್ಯಮಂಟಪದ ಎಡಗಡೆಯ ಕಂಬದಲ್ಲಿ ಒಬ್ಬ ಮಹಿಳೆ ದೂರದರ್ಶಕವನ್ನು ಹಿಡಿದ ಶಿಲ್ಪವಿದೆ. ಬಸದಿಯನ್ನು ನೋಡಿ ನಾವು ಕಲೇಜಿಗೆ ಬಂದು ವಿಶ್ರಮಿಸಿ ರಾತ್ರಿ 8.30ರ ಸುಮಾರಿಗೆ ಮೂಡಬಿದರಿಯಿಂದ ನಮ್ಮ ಹುನಗುಂದದ ಕಡೆ ಪ್ರಯಾಣ ಬೆಳೆಸಿದೆವು. ಮಾರ್ಗದ ಮಧ್ಯದಲ್ಲಿ ರಾತ್ರಿ 11.30ರ ಸುಮಾರಿಗೆ ಉಡುಪಿಯ ಹತ್ತಿರದ ಢಾಭಾದಲ್ಲಿ ಊಟ ಮಾಡಿದೆವು. 28-12-2022 ರಂದು ಬೆಳ್ಳಿಗೆ 9.30ಕ್ಕೆ ಹುನಗುಂದದ ಬಸ್ ನಿಲ್ದಾಣಕ್ಕೆ ಬಂದೆವು.

**ಉಪಸಂಹಾರ** : ಅತಂರಾಷ್ಟ್ರೀಯ ಜಾಂಬೂರಿಯು ಇದೆ ಮೊದಲ ಬಾರಿಗೆ ನಮ್ಮ ಭಾರತದಲ್ಲಿ, ಅದರಲ್ಲು ನಮ್ಮ ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯ ಜೈನ ಕಾಶಿ, ವಿದ್ಯಾಕಾಶಿ ಎಂದು ಪ್ರಸಿದ್ಧಿಯನ್ನು ಪಡೆದ ಊರು, ಸಾವಿರ ಕಂಬದ ಬಸದಿ ಇರುವ ಸ್ಥಳ ಹಾಗೂ ಭರತೇಶವೈಭವ ಕೃತಿಯನ್ನು ರಚಿಸಿದ ರತ್ನಾಕರವರ್ಣಿಯ ಜನ್ಮಸ್ಥಳವಾದ ಮೂಡಬಿದರಿಯಲ್ಲಿನ ರಾಜ್ಯದ ಪ್ರಸಿದ್ಧ ವಿದ್ಯಾಸಂಸ್ಥೆಯಾದ ಆಳ್ವಾಸ ವಿದ್ಯಾಸಂಸ್ಥೆಯ ಆವರಣದಲ್ಲಿ 21-12-2022 ರಿಂದ 27-12-2022 ರ ವರೆಗೆ ನಡೆಯಿತು. ಒಟ್ಟು 6 ದಿನಗಳ ಕಾಲ ನಡೆದ ಈ ಜಾಂಬೂರಿಯಲ್ಲಿ ವಿವಿಧ ದೇಶ ಮತ್ತು ರಾಜ್ಯಗಳಿಂದ ಹಲವಾರು ಸ್ಕೌಟ ಮತ್ತು ಗೈಡ್ಸ ಹಾಗೂ ರೋವರ್ಸ ಮತ್ತು ರೇಂಜರ್ಸಗಳು ತಮ್ಮ ತಮ್ಮ ರಾಜ್ಯದ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರದರ್ಶಿಸುವ ಅವಕಾಶವನ್ನು ನೀಡಲಾಗಿತ್ತು. ಅದೆ ರೀತಿ ನಾವು ಕೂಡಾ ನಮ್ಮ ಬಾಗಲಕೋಟೆ ಜಿಲ್ಲೆಯಿಂದ ನಾವು ಸುಗ್ಗಿಯ ನೃತ್ಯ ಹಾಗೂ ನಮ್ಮ ಭಾಗದ ಹೇಳವರ ಪದವನ್ನು ಪ್ರದರ್ಶನ ಮಾಡಲು ಬಂದಿದ್ದೆವು. ಅಂತರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯನ್ನು ಬಹಳ ಆನಂದಿಸಿದೆವು. ನಾವು ಅಲ್ಲಿ ವಿವಿಧ ರಾಜ್ಯ ಮತ್ತು ದೇಶಗಳ ನೃತ್ಯಕಲೆಗಳನ್ನು ನೋಡಿದೆವು ಮತ್ತು ಅದೇ ರೀತಿಯಾಗಿ ವೈವಿದ್ಯಮಯವಾದ ಸುಮದುರ ಸಂಗೀತವನ್ನು ಕೇಳಿದೆವು. ಅದೇ ರೀತಿಯಾಗಿ ನಾವು ಅಲ್ಲಿ ವಿವಿಧ ರಾಜ್ಯ ಮತ್ತು ದೇಶಗಳಿಂದ ಬಂದ ರೋವರ್ಸ ಮತ್ತು ರೇಂಜರ್ಸಗಳ ಜೊತೆ ಬಹಳ ಚೆನ್ನಾಗಿದ್ದೆವು. ಒಟ್ಟಿನಲ್ಲಿ ಈ ಕಾರ್ಯಕ್ರಮಗಳ ಮಧ್ಯದ ಜಾಂಬೂರಿ ಹೇಗೆ ಮುಗಿಯಿತ್ತು ಎಂಬುದು ಗೊತ್ತೆ ಆಗಲಿಲ್ಲ.

## ಜಾಂಬೂರಿಯಲ್ಲಿ ತೆಗೆದುಕೊಂಡ ಫೋಟೋಗಳು(21.12.2022)



ರಾಜ್ಯಪಾಲರಿಂದ ಜಾಂಬೂರಿಯ ಉದ್ಘಾಟನೆ



ನಮ್ಮಗೆ ನೀಡಿದ ಕಿಟ್



ಕಿಟ್‌ನ್ನು ತೆಗೆದುಕೊಂಡ ಕ್ಷಣ

## ಸಾಂಸ್ಕೃತಿಕ ತಂಡಗಳೊಂದಿಗೆ ತೆಗೆದುಕೊಂಡ ಫೋಟೋಗಳು









## ಸ್ವಚ್ಛತಾ ಕಾರ್ಯ ಮತ್ತು ಕೃಷಿಮೇಳದಲ್ಲಿ ತೆಗೆದುಕೊಂಡ ಫೋಟೊಗಳು(22.12.2022)



ಮುಲ್ಕಿಯಲ್ಲಿ ತೆಗೆದುಕೊಂಡ ಫೋಟೊ



ಕೃಷಿ ಮೇಳದಲ್ಲಿ ತೆಗೆದುಕೊಂಡ ಫೋಟೊ



ಚಿತ್ರಕಲಾ ಪ್ರದರ್ಶನದಲ್ಲಿ ತೆಗೆದುಕೊಂಡ ಫೋಟೊ




ಸ್ವಚ್ಛತಾ ಬ್ಯಾಡ್ಜ್

## ಏಕ ಭಾರತ ಶ್ರೇಷ್ಠ ಭಾರತ ಬ್ಯಾಡ್ಜಿನ ಫೋಟೋ(23-12-2022)



<u>ಹೈಕನಲ್ಲಿ ತೆಗೆದುಕೊಂಡ ಫೋಟೋಗಳು (24-12-2022)</u>



ಮಹೋಭಾರ ಸೋಮೇಶ್ವರ ದೇವಸ್ಥಾನ

ಪುತ್ತಿಗೆ






ಹೈಕನ ಬ್ಯಾಡ್ಜ್

<u>ಸಾಂಸ್ಕೃತಿಕ ನೃತ್ಯ ಮತ್ತು ಹೇಳವರಪದ ಫೋಟೋ(25-12-2022)</u>







## ಒಂದು ದಿನದ ಪ್ರವಾಸದ ಫೋಟೊಗಳು (೨೮-೧೨-೨೦೨೨)



ಕಟೀಲಿನಲ್ಲಿ ತೆಗೆದುಕೊಂಡ ಫೋಟೊ



ಜಾರಿಕಟ್ಟೆ ಕೊರಗಜ್ಜನ ದೇವಸ್ಥಾನ



ಉಡುಪಿಯಲ್ಲಿ ತೆಗೆದ ಫೋಟೊ

ಮಲ್ಪೆಯಲ್ಲಿ ತೆಗೆದ ಫೋಟೊಗಳು





## ಕೊನೆಯ ದಿನ ತೆಗೆದುಕೊಂಡ ಫೋಟೋಗಳು(27-12-2022)










## ಸಾವಿರಕಂಬದ ಬಸದಿಯ ಫೋಟೊ









**ದೂರದರ್ಶಕವನ್ನು ಹಿಡಿದ ಮಹಿಳೆ**


VMKSR ವಸ್ತ್ರದ ಕಲಾ ಹಾಗೂ ವಿಜ್ಞಾನ ಮತ್ತು
ವಿ.ಶಂಕ್ರಪ್ಪ ಬೆಳ್ಯಹಾಳ ವಾಣಿಜ್ಯ ಪದವಿ ಮಹಾವಿದ್ಯಾಲಯ
ಹುನಗುಂದ - 587118.

ಭಗತ್‌ಸಿಂಗ್ ರೋವರ್ಸ್ ಮತ್ತು
ರಾಣಿ ಚೆನ್ನಮ್ಮ ರೇಂಜರ್ಸ್ ಘಟಕಗಳ
ವಾರ್ಷಿಕ ಬೇಸಿಗೆ ಶಿಬಿರ 2021-22

ಕಾರ್ಯ ಚಟುವಟಿಕೆ:- ನಕ್ಷೆ ತಯಾರಿಸುವಿಕೆ.

ತಂಡದ ಹೆಸರು:- ಎ. ಪಿ. ಜೆ ಅಬ್ದುಲ್ ಕಲಾಂ.
ರೋವರ್ಸ್ ತಂಡ.

ಸದಸ್ಯರ ಹೆಸರು:- 1) ಅಪ್ಪಣ್ಣ. ಎಸ್. ಬಸನಾಳ
2) ಮಹಾದೇವ. ರು. ಮೇಳಿ.
3) ಆನಂದ, ಭಾ. ಶಿಮುತರ.
4) ಮರುಳಸಿದ್ದ ಅಬ. ಮು, ನದಾಫ.
5) ಭೀಮರಾಜ, ಬ, ದಯಾಳಗಿ.



ಅಂಜನಾದ್ರಿ ದೇವಸ್ಥಾನ.
ಉ
ಈ
ಪೂ
ಆ
ದ
ವಾ
127m
ಕುಡಿಯುವ
ನೀರಿನ ಟ್ಯಾಂಕ್
ಕಲ್ಲಿನ ಮನೆ
ಕಟ್ಟುತ್ತಿರು
35m
10m
80m
ಬಾಬಾ
ಲಕ್ಕಡದಾಸ
ಪ್ರತಿಮೆ.
85m
70m
60m
50m
ಆಂಜನೇಯ ಮೂರ್ತಿ
ಛತ್ರ ಇಲಾಖೆ.
ಅಂಗಡಿ
ವಿಶ್ರಾಂತಿ ಪಡೆಯುವ
ಸ್ಥಳ.

# ಅಂಜನಾದ್ರಿ :-

ದಿನಾಂಕ :- 19/6/2022 ರಂದು ವಿ.ಎಂ.ಎಸ್. ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ - 587118 ಹಾಗೂ ಭಗತಸಿಂಗ ರೋವರ್ಸ್ ಮತ್ತು ರಾಣಿ ಚೆನ್ನಮ್ಮ ರೇಂಜರ್ಸ್ ಘಟಕಗಳು ವಾರ್ಷಿಕ ವಸತಿ ಶಿಬಿರದ ಆಯೋಜಿಸಿದ್ದ ಒಂದು ದಿನದ ಶೈಕ್ಷಣಿಕ ಪ್ರವಾಸ (ಚಾರಣ)ದ ಅಂಗವಾಗಿ ಅಂಜನಾದ್ರಿಗೆ ದಿ:-19/6/22 ರಂದು ಬೆಳಿಗ್ಗೆ ಸುಮಾರು 9:00 ಗಂಟೆಗೆ ತಲುಪಿದೆವು. ವಾಹನ ನಿಲ್ಲಿಸಿದ ಸ್ಥಳದಲ್ಲಿ ವಾಹನ ನಿಲ್ಲಿಸಿ (ಎಲ್ಲರು) ರೋವರ್ಸ್ ಮತ್ತು ರೇಂಜರ್ಸ್ ಒಟ್ಟಿಗೆ ಸೇರಿ ನಮ್ಮ ತಂಡಗಳ ನಾಯಕ ಮತ್ತು ನಾಯಕಿ ಆಯ್ಕೆ ಮಾಡಿದೆವು. ಭಗತ್ ಸಿಂಗ ನಾಯಕರಾದ ಎಸ್. ಎಸ್. ಆರ್. ನಾಗಣ್ಣನವರ ಸರ್ ಮೊದಲಿಗೆ ಐದು ತಂಡ ಮಾಡಿ ತಂಡಗಳ ಗುಂಪುಗಳಾಗಿ ವಿಂಗಡಿಸಿದರು ಈ ಸಂದರ್ಭದಲ್ಲಿ ಆನಂದ. ಕಮತರ, ಮಾಹಮ್ಮದಲಿ. ನದಾಫ್, ತಿಪ್ಪಣ್ಣ. ಬಿ ದಿನ್ನಿ, ಮಹಾದೇವಪ್ಪ. ಪೂಜಾರಿ, ಬಸವರಾಜ್. ಮೇಗಳಮನಿ ಇವರನ್ನು ಒಂದು ಗುಂಪಿನವರನ್ನಾಗಿ ಇವರ ಹೆಸರು A. P. J. Abdul Kalam ಎಂದು ಗುರುತಿಸಿದರು. ನಂತರ ಎಲ್ಲ ಗುಂಪುಗಳ ಅವರವರಂತೆಯೇ ಚಟುವಟಿಕೆಯನ್ನು ನೀಡಿದರು. ಹಾಗೆ ನಮಗೂ ಅವರಂತೆಯೇ ನಮಗೆ ವಹಿಸಿದಂತಹ ಚಟುವಟಿಕೆಯೆಂದರೆ ನಾವು ಭೇಟಿ ನೀಡುವ ಎಲ್ಲಾ ಪ್ರೇಕ್ಷಣೀಯ ಸ್ಥಳಗಳ ನಕ್ಷೆಯನ್ನು ಬಿಡಿಸಿ ಕ್ರಮಬದ್ಧವಾದಂತೆ ಸ್ಥಳಗಳನ್ನು ಗುರುತಿಸುವಂತೆ ಸೂಚಿಸಿದರು. ನಂತರದಲ್ಲಿ ನಮಗೆ ವಹಿಸಿದಂತಹ ಕಾರ್ಯ ಚಟುವಟಿಕೆಯನ್ನೂ ನಮ್ಮ A. P. J. Abdul Kalam ತಂಡದ ಸದಸ್ಯರು ಕಾರ್ಯ ಪ್ರವೃತ್ತರಾದೆವು. ನಮ್ಮ ತಂಡದ ಸದಸ್ಯರೆಲ್ಲರೂ ಸೇರಿ ವಾಹನ ನಿಲುಗಡೆ ಸ್ಥಳದಿಂದಲೇ ನಕ್ಷೆಯನ್ನು ಬಿಡಿಸಲು ಪ್ರಾರಂಭಿಸಿದೆವು

ಚಾರಣ ಮಾಡುವ ಸಂದರ್ಭದಲ್ಲಿ ನಕ್ಷೆಯನ್ನು ಬಳಸುತ್ತಾ ಇದರ ಜೊತೆಗೆ ವಿವಿಧ ಸ್ಥಳಗಳಿಂದ ಬಂದಂತಹ ಪ್ರವಾಸಿಗರ ಉಡುಗೆ ತೊಡುಗೆಗಳನ್ನು, ಅವರ ಹಾವಭಾವಗಳನ್ನು ಈ ಸುತ್ತಮುತ್ತಲಿನ ಸುಂದರ ತೋಟ, ಹೊಲ ಗದ್ದೆಗಳನ್ನು ನೋಡುತ್ತಾ ಹಚ್ಚ ಹಸಿರಿನ ಗುಡ್ಡಗಳು ನಮಗೆ ಸ್ವಾಗತಿಸಿದಂತೆ ನಕ್ಷೆ ಕ್ರಮವನ್ನು ನೋಡಿ ಹಾದಿ ತಪ್ಪಿದ ನಂತರ ಗುಡ್ಡಗಳು ನಮ್ಮನ್ನು ಸ್ವಾಗತ ಮಾಡುತ್ತಾ ಗೆದ್ದು ಬಂದ ಗುರುತಿಸಿದರು. ನಮ್ಮ ಜೊತೆ ಮಾತನಾಡಿದರು. ದಾರಿಯಲ್ಲಿ ಗುಡಿಗೆ ಮೇಲೆ ಹೋಗಲು ಮೆಟ್ಟಿಲುಗಳು ಪ್ರಾರಂಭ ಸ್ಥಳದಿಂದ ಬಿಳಿ ಬಣ್ಣದ ಪಟ್ಟಿಯಿಂದ ಮೆಟ್ಟಿಲುಗಳು ಮೇಲೆ ದಾರಿ ಸೂಚಿಸಿರುವುದು ಹಾಗೂ ಮತ್ತು ಕೆಲವರು ರಾಮ ನಾಮ, ಹನುಮಾನ ಚಾಲೀಸ ಹಾಗೂ ಜೈ ಶ್ರೀರಾಮ್ ಎಂದು ಮಂತ್ರ ಪಠಣ ಮಾಡುತ್ತಿದ್ದರು. ಕೊನೆಗೆ ಹನುಮನ ಗುಡಿ ಅಂಜನಾದ್ರಿ ಬೆಟ್ಟದ ತುದಿ ನಿಂತ ಸ್ಥಳವನ್ನು ತಲುಪಿದೆವು ಹನುಮನ ದರ್ಶನ ಪಡೆದು ಹೊರ ಬಂದು ಮತ್ತೆ ಎಲ್ಲರೂ ಸೇರಿ ಗುಂಪು ಚಿತ್ರವನ್ನು ತೆಗೆಸಿಕೊಂಡೆವು. ಮರಳಿ ವಾಹನವನ್ನು ಏರಿ ಆನೆಗೊಂದಿಗೆ ಹೊರಟೆವು.

ಆನೆಗೊಂದಿಗೆ ತಲುಪಿ ಅರಮನೆ ವೀಕ್ಷಿಸಲು ನಿಂತೆವು, ಹೊಸದಾಗ ಅರಮನೆ ರಾಜ

## ಹನುಮನ ಜನ್ಮಸ್ಥಳ - ಅಂಜನಾದ್ರಿ ಬೆಟ್ಟದ ರಹಸ್ಯ :-


ಕೇಸರಿ ನಂದನ, ವಾಯುಪುತ್ರ, ಬಜರಂಗಬಲಿ ಹೀಗೆ ನಾನಾ ಹೆಸರುಗಳಿಂದ ಕರೆಯಲ್ಪಡುವ ಹನುಮನು, ಭಗವಂತ ಶಿವನ ಅಂಶಾಂಶನು. ಶ್ರೀರಾಮನ ಪರಮ ಭಕ್ತ ಆಂಜನೇಯನನ್ನು ಶಿವನ ಅವತಾರವೆಂದು ಶಿವ ಪುರಾಣಗಳಲ್ಲಿ ಹೇಳಲಾಗಿದೆ.

ಇತ್ತೀಚೆಗೆ ಕರ್ನಾಟಕದ ಅಂಜನಾದ್ರಿ ಪರ್ವತ ಆಂಜನೇಯನ ಜನ್ಮಸ್ಥಳವೆಂದು ರಾಮಾಯಣದಲ್ಲಿ ಉಲ್ಲೇಖಿಸಲಾಗಿದೆ. ಸಪ್ತಗಿರಿಬೆಟ್ಟಗಳಲ್ಲಿ ಒಂದಾದ ಹನುಮಂತನಿಗಾಗಿ ಅಂಜನಾದ್ರಿ ಪರ್ವತದ ಮೇಲೆ ಸುಂದರವಾದ ದೇವಾಲಯವನ್ನು ನಿರ್ಮಿಸಲಾಗಿದೆ. ಆದರೆ ಇದೀಗ, ತಿರುಪತಿ ತಿರುಮಲ ದೇವಸ್ಥಾನ ಟ್ರಸ್ಟ್ ಟಿಟಿಡಿ, ಆಂಜನೇಯ ಜನಿಸಿದ್ದು ತಿರುಮಲದಲ್ಲಿರುವ ಅಂಜನಾದ್ರಿಯಲ್ಲಿ ಎನ್ನುತ್ತಿದೆ.

ಪುರಾಣಗಳ ಪ್ರಕಾರ, ಕರ್ನಾಟಕದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿ ಬೆಟ್ಟದಲ್ಲಿ ಆಂಜನೇಯ ಜನ್ಮ ತಾಳಿದ. ಭಾರತೀಯ ಇತಿಹಾಸದಲ್ಲಿ ಅಂಜನಾದ್ರಿ ಪರ್ವತಕ್ಕೆ ವಿಶೇಷ ಸ್ಥಾನವಿದೆ. ಅಂಜನಾದೇವಿ ಆಂಜನೇಯನಿಗೆ ಇಲ್ಲಿ ಜನ್ಮ ನೀಡಿದ್ದರಿಂದ ಈ ಬೆಟ್ಟಕ್ಕೆ ಅಂಜನಾದ್ರಿ ಪರ್ವತ ಎಂಬ ಹೆಸರು ಬಂದಿದೆ.

### ರಾಮಾಯಣದಲ್ಲಿ ಅಂಜನಾದ್ರಿ ಬೆಟ್ಟಕ್ಕಿರುವ ಮಹತ್ವವೇನು ಗೊತ್ತಾ ?

ರಾಮಾಯಣದಲ್ಲಿ ಬರುವ 5 ಪರ್ವತಗಳನ್ನು ನಾವು ಈ ಭಾಗದಲ್ಲಿಯೇ ಕಾಣಬಹುದು, ಮೊದಲನೆಯದಾಗಿ ನವವೃಂದಾವನ ಗಡ್ಡೆಯ ಎಡ ಭಾಗದಲ್ಲಿ ಕಂಡು ಬರುವ ತಾರಾ ಪರ್ವತ, ಎರಡನೆಯದ್ದು ಹನುಮನಹಳ್ಳಿಯಲ್ಲಿರುವ ಋಷ್ಯಮುಖ ಪರ್ವತ, ಮೂರನೆಯದ್ದು ಪಂಪಾಸರೋವರದ ಬಳಿ ಬರುವ ವಾಲಿ ಪರ್ವತ, ನಾಲ್ಕನೆಯದ್ದು ಅಂಜನಾದ್ರಿ ಪರ್ವತ, ಐದನೆಯದ್ದು ಹಂಪಿಯಲ್ಲಿರುವ ಮಾತಂಗ ಪರ್ವತ. ಇವುಗಳು ರಾಮಾಯಣ ಕಾಲ ಪ್ರಾಚೀನದಿಂದಲೂ ಸಮರ್ಥ ಕಾರಣಗಳಿಗಾಗಿ ಉಗಮವಾಗಿರುವ ಪರ್ವತಗಳು ಎಂದು ಹೇಳಲಾಗುತ್ತದೆ. ಅಲ್ಲದೆ ಇಲ್ಲಿ ಆಂಜನೇಯ ತನ್ನ ಬಾಲ್ಯವನ್ನು ಈ ಪರ್ವತಗಳಲ್ಲಿಯೇ ಕಳೆದಿದ್ದನು ಎಂಬ ಉಲ್ಲೇಖಗಳು ಇವೆ.


2022/6/17 10:05


2022/6/17 10:02





## ಚಿತ್ರ ಕಲಾ ಸಂಗ್ರಹಾಲಯ :-

ಹಂಪಿ ಬಳಿಯ ನಮ್ಮ ಕನ್ನಡ

ನಾಡಿನಲ್ಲಿರುವ ಪ್ರಾಚೀನ ಸಂಗ್ರಹಾಲಯ ಮಹಾಗಳಲ್ಲಿ, ಪ್ರಾಚೀನ ಭಾರತೀಯ ಶಿಲ್ಪಕಲೆ ಸಮೃದ್ಧ ನಾಗರೀಕತೆ ಇಲ್ಲಿ ಪ್ರದರ್ಶಿಸಿದೆ. ಈ ಎಲ್ಲಾ ಸಂಗ್ರಹಾಲಯಗಳ ನಡುವೆ ಇರುವುದು ನಮ್ಮ ಕಲ್ಯಾಣ ಕರ್ನಾಟಕದ ಕಮಲಾಪುರ ನಗರದಲ್ಲಿರುವ ಚಿತ್ರ ಕಲಾ ಚಿತ್ರ ಸಂಗ್ರಹಾಲಯ. ಇಲ್ಲಿಂದ ಕಿತ್ತರ ಪ್ರಾಚೀನ ಸಂಗ್ರಹಿಸಿದ್ದು, ಇದು ಕಿನ್ನರ, ಕಿನ್ನರಿಯರ. ಚಿತ್ರಕ್ಕೆ ಬರೆಯ ಮಾಡಿದ್ದು ಮತ್ತು ಸಂರಕ್ಷಿಸಿಲ್ಲದ. ಕಮಲಾಪುರದ ಶಿಲ್ಪಕಲಾ ವೈಭವವನ್ನು ಬಿಂಬಿಸುತ್ತದೆ. ಇದು ಹಂಪಿಯ ಕಲೆ ಸಂಸ್ಕೃತಿ ಮತ್ತು ಕಲಾತ್ಮಕ ಪರಂಪರೆಯ ಸಂಗ್ರಹ. ಇದು ಹಂಪಿಯ ಹೆಮ್ಮೆಯ ಭಾಗವಾಗಿದೆ.

ಈ ಸಂಗ್ರಹಾಲಯ ಶಿಲ್ಪಕಲೆ, ಕಲಾಕೃತಿಗಳನ್ನು ಇಲ್ಲಿಂದ ಸಂಗ್ರಹಿಸಿ ಜೊತೆಗೆ ಜೋಡಿಸಿ ಪ್ರದರ್ಶಿಸಲಾಗಿದ್ದು, ಇಲ್ಲಿನ ಕಲಾಕೃತಿ ಕಣ್ಮನ ಸೆಳೆಯುತ್ತದೆ. ಇಲ್ಲಿನ ಕಲ್ಲಿನ ರಥ ಮತ್ತು, ಸಂಗೀತ ಸ್ತಂಭಗಳಂತಹ ಅದ್ಭುತ ಕಲ್ಲಿನ ಕೆತ್ತನೆಗಳನ್ನು ನಮ್ಮ ಕಣ್ಣಾರೆ ನೋಡಬಹುದು. ಸಂಗ್ರಹಾಲಯವನ್ನು ಕಾಣುತ್ತೇವೆ. ಹಂಪಿಯ ಈ ಪ್ರಮುಖ ಸ್ಥಳವು ಪ್ರವಾಸಿಗರ ಈ ಐತಿಹಾಸಿಕ ನಗರದ ಪ್ರಮುಖ ಆಕರ್ಷಣೆಯಾಗಿದೆ ಮತ್ತು ಪ್ರವಾಸಿಗರು ಮತ್ತು ಇಲ್ಲಿಗೆ ಭೇಟಿ ನೀಡುವವರೆಲ್ಲರೂ ನೋಡಲೇಬೇಕಾದ ಸ್ಥಳವಾಗಿದೆ.

ಭೇಟಿಯ ಸಮಯ :- ವಾರದ ಎಲ್ಲಾ ದಿನಗಳಲ್ಲಿ ಬೆಳಗ್ಗೆ 8:30 ರಿಂದ ಸಂಜೆ 5:00 ರವರೆಗೆ

ಪ್ರವೇಶ ಶುಲ್ಕ :- ಪ್ರವೇಶ ಶುಲ್ಕ ಇರುವುದಿಲ್ಲ

ಛಾಯಾಗ್ರಹಣ :- ಅನುಮತಿಸಲಾಗಿದೆ.

ವೀಡಿಯೋ ಚಿತ್ರೀಕರಣ :- ಅನುಮತಿಸಲಾಗಿದೆ.

ಈ ಸ್ಥಳಕ್ಕೆ ಭೇಟಿಗೆ ಪ್ರಶಸ್ತ ಸಮಯ :- ಸುಮಾರು 3 ಗಂಟೆ

ಭೇಟಿ ನೀಡಲು ಉತ್ತಮ ತಿಂಗಳುಗಳು :- ನವೆಂಬರ್‌ನಿಂದ ಫೆಬ್ರವರಿವರೆಗೆ


## ಆನೆಗೊಂದಿ :-

ಆನೆಗೊಂದಿ ಕರ್ನಾಟಕ ರಾಜ್ಯಕ್ಕೆ ಸೇರಿದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ಹೊಸಪೇಟೆಯಿಂದ ಸುಮಾರು 16 ಕಿಮೀಗಳ ಮೇಲಿನ ತುಂಗಭದ್ರ ನದಿಯ ಸಂದಿಯಲ್ಲಿನ ಒಕ್ಕೊಂದು ಗ್ರಾಮ ಇದು ರಾಮಾಯಣ ಕಾಲದಲ್ಲಿ ಕಿಷ್ಕಿಂದೆಯ ವಾಲಿಯ ರಾಜಧಾನಿಯಾಗಿತ್ತು ಎಂದು ಪ್ರತೀತಿ

ಇದನ್ನೇ ಕಿಷ್ಕಿಂಧೆಯೆಂದು ಪ್ರಸಿದ್ಧಿಯಾಗಿತ್ತು. ರಾಮಚಂದ್ರ ವಾಲಿಯನ್ನು ಕೊಂದು ಕಿಷ್ಕಿಂಧೆಯನ್ನು ಸುಗ್ರೀವನಿಗೆ ಕೊಟ್ಟನೆಂದು ಸುಗ್ರೀವ ಮಂತ್ರಿಯಾದ ಹನುಮಂತನ ಪ್ರತ್ಯಕ್ಷ ಕಿಕ್ಕಿನೆಯನ್ನು ಬಿಟ್ಟು ರಾವಣನನ್ನು ಸಂಹರಿಸಿ ಸೀತೆಯನ್ನು ಬಂಧನದಿಂದ ಬಿಡಿಸಿಕೊಂಡ ಬಗ್ಗೆ ರಾಮಾಯಣದಲ್ಲಿ ಹೇಳಿದೆ. ದಕ್ಷಿಣ ಭಾರತದಲ್ಲಿ ನಿಸರ್ಗ ರಮಣೀಯವಾದ ಸ್ಥಳಗಳ ಸುಗಮವಾಗಿದ್ದು. ಇದು ಬಹು ಪ್ರಾಚೀನ ಕಾಲದಿಂದಲೂ ರಾಜಧಾನಿಯಾಗಿ ಪ್ರಸಿದ್ಧಿಯನ್ನು ಹೊಂದಿದೆ.


ಆನೆಗೊಂದಿ ಭೂಸುಧಾರಣಾ ನೀತಿ ಉಲ್ಲೇಖನಾರ್ಹವಾಗಿದೆ. ಕೃಷ್ಣದೇವರಾಯ ತನ್ನ ಮಂತ್ರಿಯಾದ ಅಪ್ಪಾಜಿಯ ಸಹಕಾರದಿಂದ ಭೂಮಿಯನ್ನು ಗ್ರಾಮದಿಣ್ಣ ಎಕರೆಯಂತೆ ಮೇಲಿನ ಅಳತೆ ಮಾಡಿಸಿ. ಕಂದಾಯ ಮಾಡಿದ. ಈ ಪದ್ಧತಿಯನ್ನು ಮುಂದಿನ ಅನೇಕರು ತಮ್ಮ ರಾಜ್ಯಗಳಲ್ಲಿ ಜಾರಿ ತಂದರು. 1896 ರಲ್ಲಿ ಭೂಸುಧಾರಣೆಗೆ ಕ್ಯಾಪ್ಟನ್ ಮನ್ರೋ ಅವರು ಆನೆಗೊಂದಿಯ ವಿಧಾನವನ್ನು ಹೊಂದಿದ್ದಾರೆ.

ಕರ್ನಾಟಕ ಮಾತ್ರವಲ್ಲ ಭಾರತೀಯ ಇತಿಹಾಸದಲ್ಲೇ ವಿಜಯನಗರ ಸಾಮ್ರಾಜ್ಯಕ್ಕೆ ಎಲ್ಲಿಲ್ಲದ ಮಹತ್ವವಿದೆ. ಈ ವಿಜಯನಗರ ಮೊದಲ ರಾಜಧಾನಿಯಾಗಿದ್ದು ಆನೆಗೊಂದಿ. ಇಲ್ಲಿ ಅನೇಕ ರಾಜರು ಆಡಳಿತ ನಡೆಸಿದ್ದು ಗೊತ್ತಿರುವ ಸಂಗತಿ. ಇದರ ಜೊತೆಗೆ ಹಿಂದೆ ಆನೆಗೊಂದಿಯಲ್ಲಿ ನಿರ್ಮಾಣವಾಗಿದ್ದ ಹಿರೇ ದಿವಾನ್ ಎಂಬ ಬಂಗಲೆಯನ್ನು ರಾಮಕೃಷ್ಣ ಕೃಷ್ಣದೇವರಾಯ ಅವರು ಜೀರ್ಣೋದ್ಧಾರ ಮಾಡಿದ್ದಾರೆ.




Parking


Parking

# ವಿರೂಪಾಕ್ಷ ದೇವಾಲಯ

ವಿಜಯನಗರದ ಸಾಮ್ರಾಜ್ಯ ಕುಲದೇವರಾದ ವಿರೂಪಾಕ್ಷ ದೇವಾಲಯವು ನಾವು ಪ್ರವಾಸಕ್ಕೆ ಹೋಗುವ ಸ್ಥಳ ಹಂಪಿಯಲ್ಲಿ. ಸಾಮಾನ್ಯ ಪ್ರಶ್ನೆಯಲ್ಲಿ ಹಲವು ಶಾಸನಗಳು ಪ್ರಸ್ತುತವಾಗಿವೆ. ಗೋಪುರದ ಮುಂಭಾಗದಿಂದ ದೇವಾಲಯಕ್ಕೆ ಕಿಂತಂತ ಪ್ರವೇಶ ನೀಡುತ್ತದೆ. ಪ್ರಸ್ತುತ. ಮುಖ್ಯ ದೇವಸ್ಥಾನವು ಗರ್ಭಗುಡಿ, ಮಂಟಪ ಮುಂಭಾಗದ ಕೋಣೆ. ಒಳಯ ಕಂಬದ ಕೋಣೆ ಮತ್ತು ತೆರೆದ ಕಂಬದ ಸಭಾಂಗಣವನ್ನು ಒಳಗೊಂಡಿದೆ. ಒಂದು ಕಂಬದ ಛಾವಣಿ, ಪ್ರವೇಶ ದ್ವಾರಗಳು, ಅಂಗಳಗಳು, ಸಣ್ಣ ದೇವಾಲಯಗಳು ಮತ್ತು ಇತರ ರಚನೆಗಳು ದೇವಾಲಯ ಸುತ್ತಲು ಇವೆ. ಒಂಬತ್ತು ಅಂತಸ್ತಿನ ಪ್ರಮುಖ ಪೂರ್ವ ಮುಂಭಾಗವು, ಇದು 50 ಮೀಟರ್‌ಗಳಷ್ಟು ಎತ್ತರವಾಗಿದೆ, ಇದು ಪ್ರಮುಖವಾಗಿದೆ. ಕೆಲವು ಜೀಯನ ವಿನ್ಯಾಸಗಳನ್ನು ಒಳಗೊಂಡಿದೆ. ಇದು ಇಟ್ಟಿಗೆ ಮೇಲ್ಭಾಗ ಮತ್ತು ಕಲ್ಲಿನ ನೆಲೆಯನ್ನು ಹೊಂದಿದೆ. ಅಲ್ಲಿನ ಗೈಡ್ ಹೇಳುವ ಪ್ರಕಾರ ಇಟ್ಟಿಗೆಯನ್ನು ನೀರಿಗೆ ಹಾಕಿದರೆ ತೇಲುತ್ತಾ ಹೋಗುತ್ತದೆ. ಇದು ಹಲವು ಉಪ-ಮಂದಿರಗಳನ್ನು ಹೊಂದಿರುವ ಹೊರಗಿನ ನ್ಯಾಯಾಲಯಕ್ಕೆ ಪ್ರವೇಶವನ್ನು ನೀಡುತ್ತದೆ. ಸಣ್ಣ ಪೂರ್ವದ ಮುಂಭಾಗದಿಂದ ಒಳಗಿನ ನ್ಯಾಯಾಲಯಕ್ಕೆ ಅದರ ಹಲವು ಸಣ್ಣ ಪುಣ್ಯಕ್ಷೇತ್ರಗಳೊಂದಿಗೆ ಕಾರಣವಾಗುತ್ತದೆ. ಉತ್ತರ ಕಡೆಗೆ ದೇವತ್ರೆಯು ಗೋಪುರವು ಕನಕಗಿರಿ ಗೋಪುರ ಎಂದು ಕರೆಯಲ್ಪಡುತ್ತದೆ. ವಿಜಯನಗರದ ಸಾಮ್ರಾಜ್ಯ ಪ್ರಸಿದ್ಧ ರಾಜರಲ್ಲಿ ಒಬ್ಬರಾದ ಕೃಷ್ಣದೇವರಾಯ ಈ ದೇವಾಲಯದ ಮುಖ್ಯ ಪೋಷಕರಾಗಿದ್ದರು. ದೇವಾಲಯ ಮುಖ್ಯ ಗೋಪುರದ ನೆರಳು ದೇವಾಲಯದ ಗೋಡೆಯ ಮೇಲೆ ತಲೆ ಕೆಳಗಾಗಿ ಬೀಳುವುದು ವಿಶೇಷ. ದೇವಾಲಯದ ಭೌಗೋಳಿಕ ನಿರ್ದೇಶಾಂಕಗಳು

15.335165° N , 76.458727° E.

# ಚಾರಣದ ಕಥೆ

ಕಥೆಯ ಹಿನ್ನೆಲೆ: ಜಂಬೂದೇಶದ ಕಲ್ಪತರು ರಾಜ್ಯದಲ್ಲಿ ಬಾಂಗಲಪುರ ಎಂಬ ಪ್ರಾಂತ್ಯವಿದೆ. ಆ ಪ್ರಾಂತ್ಯದಲ್ಲಿ ಮೊನಗುಂದ ಎಂಬ ಪಟ್ಟಣವಿದೆ. ಆ ಪಟ್ಟಣದಲ್ಲಿ ಅನೇಕ ಘಟಿಕಾಸ್ಥಾನಗಳಿದ್ದು ಅವುಗಳಲ್ಲಿ ಒಂದು ಘಟಿಕಾ ಸ್ಥಾನ ತುಂಬಾ ಪ್ರಸಿದ್ಧವಾಗಿತ್ತು, ಆ ಘಟಿಕಾ ಸ್ಥಾನದ ಹೆಸರು ಶ್ರೀ ವಿಜಯ ಮಹಾಂತೇಶ್ವರ ಘಟಿಕಾ ಸ್ಥಾನ. ಆ ಘಟಿಕಾ ಸ್ಥಾನದಲ್ಲಿ೧೦೦೦ ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಅಲ್ಲಿ ಶಿಕ್ಷಣವನ್ನು ಪಡೆಯುತ್ತೀದ್ದರು. ಆ ಘಟಿಕಾ ಸ್ಥಾನದಲ್ಲಿ ಅನೇಕ ಸೇವಾ ಸಂಸ್ಥೆಗಳಿದ್ದವು, ಅವುಗಳು ವಿದ್ಯಾರ್ಥಿಗಳನ್ನು ಕ್ರಿಯಾಶೀಲರನ್ನಾಗಿ ಮಾಡುವ ಕೆಲಸವನ್ನು ಮಾಡುತ್ತಿದ್ದವು. ಅವುಗಳಲ್ಲಿ ಒಂದು ಸಂಸ್ಥೆಯಲ್ಲಿ ನಮ್ಮ ಕಥಾ ನಾಯಕನು ಕೂಡಾ ಇದ್ದನು, ಆ ಸಂಸ್ಥೆಯ ಹೆಸರು ಜಂಬೂದೇಶ ಕ್ರಿಯಾಶೀಲ ಯುವ ಸಂಸ್ಥೆ ಅದರ ಹೆಸರಾಗಿತ್ತು. ಆ ಸಂಸ್ಥೆಯಲ್ಲಿ ಕೇವಲ ಯುವಕರಷ್ಟೆ ಇದ್ದಿರಲಿಲ್ಲ ಯುವತಿಯರು ಕೂಡಾ ಇದ್ದರು. ಆ ಸಂಸ್ಥೆಯ ಯುವಕರ ವಿಭಾಗದ ಸಂಚಾಲಕರು ಓರ್ವ ಇತಿಹಾಸ ವಿಷಯದ ಪ್ರಾದ್ಯಾಪಕರಾಗಿದ್ದರು ಅವರ ಹೆಸರು ಆನಂದ ಮತ್ತು ಯುವತಿಯರ ವಿಭಾಗದ ಸಂಚಾಲಕಿಯರು ಗಣಿತ ವಿಷಯದ ಪ್ರಾದ್ಯಾಪಕಿಯಾಗಿದ್ದರು ಅವರ ಹೆಸರು ಲೀಲಾ. ಆ ಸಂಸ್ಥೆಯು ಸಂಚಾಲಕರ ಮಾರ್ಗದರ್ಶನದಲ್ಲಿ ಹಾಗೂ ಆ ಘಟಿಕ ಸ್ಥಾನದ ಕುಲಪತಿಗಳ ಸಹಯೋಗದಲ್ಲಿ ಜೇಷ್ಠಮಾಸದ ೧೬,೧೭,೧೮,೧೯ ಮತ್ತು ೨೦ ದಿನಗಳಂದು ೫ ದಿನಗಳ ಶಿಬಿರವನ್ನು ಆಯೋಜಿಸಲಾಗಿತ್ತು. ೧೬ ನೇ ತಾರೀಖಿನಂದು ಶಿಬಿರದ ಉದ್ಘಾಟನಾ ಸಮಾರಂಭವಾಯಿತು. ನಂತರ ಮರುದಿನ ೧೭ ನೇ ತಾರೀಖಿನಂದು ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿತ್ತು. ಆ ಕಾರ್ಯಕ್ರಮದಲ್ಲಿ ಆ ಪಟ್ಟಣದ ಪ್ರತಿಷ್ಠಿತ ವೈದ್ಯರಾದ ಶಾಂತೇಶರವರು ಬಂದು ಆ ಸೇವಾ ಸಂಸ್ಥೆಯಲ್ಲಿನ ವಿದ್ಯಾರ್ಥಿಗಳಿಗೆ ಪ್ರಥಮ ಚಿಕಿತ್ಸೆ ಯಾವ ರೀತಿಯಾಗಿ ಮಾಡಬೇಕೆಂದು ಮಾಹಿತಿ ನೀಡಿದರು. ೧೮ ರಂದು ಆ ಸೇವಾ ಸಂಸ್ಥೆಯಲ್ಲಿನ ಒಬ್ಬ ಹಿರಿಯ ಸಂಚಾಲಕರು ವಿದ್ಯಾರ್ಥಿಗಳಿಗೆ ಆ ಸಂಸ್ಥೆಯಲ್ಲಿನ ಒಂದಿಷ್ಟು ಕ್ರಿಯಾಶೀಲ ಚಟುವಟಿಕೆಗಳನ್ನು ಯಾವ ರೀತಿ ಮಾಡಬೇಕೆಂದು ಮಾಹಿತಿ ನೀಡಿದರು ಮತ್ತು ಅವತೀನ ಕಾರ್ಯಕ್ರಮ ಮುಗಿದ ನಂತರ ಸಂಚಾಲಕರು ೧೯ನೇ ತಾರೀಖಿನಂದು ಒಂದು ದಿನದ ಚಾರಣವನ್ನು ಏರ್ಪಡಿಸಿದರು ಮತ್ತು ಎಲ್ಲ ವಿದ್ಯಾರ್ಥಿಗಳಿಗೆ ಒಂದೊಂದು ತರಹದ ಆಹಾರವನ್ನು ಮಾಡಿಕೊಂಡು ಬರಲು ಹೇಳಿದ್ದರು ಹಾಗೂ ಎಲ್ಲರಿಗೂ೧೫೦ ರೂ ಹಣಗಳನ್ನು ತರಲು ಹೇಳಿ, ಎಲ್ಲರಿಗೂ ಮುಂಜಾನೆ ೫:೩೦ರ ಸುಮಾರಿಗೆ ಬರಲು ಹೇಳಿದರು.

ಈ ಕಥೆಯ ನಾಯಕನಿಗೆ ಸಂಚಾಲಕರು ಒಂದು ತರಹದ ಸಿಹಿ ತಿನಿಸು ಮತ್ತು ಪಲ್ಯವನ್ನು ಮಾಡಿಕೊಂಡು ಬರಲು ಹೇಳಿದ್ದರು. ಅದೇ ರೀತಿ ೧೮ನೇ ತಾರೀಖಿನ ರಾತ್ರಿ ನಾಯಕ ಮತ್ತು ಅವನ ತಾಯಿ ಸರೋಜಮ್ಮಳ ಜೊತೆಗೂಡಿ ಪಾಕದ ಉಂಡೆಯನ್ನು ಮತ್ತು ಕಾಳು ಪಲ್ಯವನ್ನು ತಯಾರಿಸಿದನು. ಇಲ್ಲಿಂದ ಚಾರಣದ ಕಥೆ ಶುರು.

೧೯ನೇ ತಾರೀಖಿನಂದು ಮುಂಜಾನೆ ೫:೩೦ರ ಸುಮಾರಿಗೆ ಘಟಿಕಾಸ್ಥಾನದ ಮುಂದೆ ಸಂಚಾಲಕರು ಒಂದು ಖಾಸಗಿ ವಾಹನವನ್ನು ಕರೆಸಿದ್ದರು. ಆ ಸಂಸ್ಥೆಯ ಯುವಕರ ತಂಡದ ನಾಯಕನಾದ ಮಹಾಂತನಿಗೆ ನಮ್ಮ ನಾಯಕ ಮತ್ತು ಅವನ ಎಲ್ಲ ಸಹಚರರರು ಅವನಿಗೆ ೧೫೦ರೂ ಹಣವನ್ನು ಕೊಟ್ಟು ವಾಹನವನ್ನು ಪ್ರವೇಶಿಸಿದರು. ಆ ಚಾರಣದಲ್ಲಿ ಸಂಚಾಲಕರ ಜೊತೆ ಘಟಿಕಾಸ್ಥಾನದ ಗ್ರಂಥಪಾಲಕು ಕೂಡಾ ಬಂದಿದ್ದರು. ಖಾಸಗಿ ವಾಹನ ಪೊನ್ನಗುಂದದಿಂದ ಸುಮಾರು ೬:೦೦ ಗೆ ಅಂಜನ ಪರ್ವತದ ಕಡೆಗೆ ಪಯಣ ಸಾಗಿತು. ಮಾರ್ಗದ ಮಧ್ಯದಲ್ಲಿ ಮುಂಜಾನೆಯ ಉಪಹಾರಕ್ಕೆ ನಿಲ್ಲಿಸಲಾಯಿತು. ಉಪಹಾರ ಮುಗಿದ ನಂತರ ಮತ್ತೆ ಅಂಜನ ಪರ್ವತದ ಕಡೆಗೆ ಪ್ರಯಾಣ ಸಾಗಿತು. ವಾಹನದಲ್ಲಿ ಎಲ್ಲರು ಆಧುನಿಕ ಜಾನಪದ ಹಾಡುಗಳನ್ನ ಹಾಡುತ್ತಿದ್ದರು ಆದರೆ ನಾಯಕ ಅವರ ಹಾಡುಗಳನ್ನು ಕೇಳುತ್ತ ಸುಂದರವಾದ ಬೆಟ್ಟಗಳನ್ನು ಮತ್ತು ಭತ್ತದ ಗದ್ದೆಗಳನ್ನು ವಾಹನದ ಕೀಟಕಿಯಿಂದ ನೋಡುತ್ತಿದ್ದನು. ಅವನು ಮತ್ತು ವಾಹನದಲ್ಲಿದ್ದ ಅವನ ಸಹಚರರರು ಅಂಜನ ಪರ್ವತದ ಸಮೀಪದಲ್ಲಿದ್ದ ಮಾರುತಿಪುರದಲ್ಲಿನ ವಿದ್ಯಾರಣ್ಯಪುರ ಸಾಮ್ರಾಜ್ಯದ ಕಾಲದ ಸೇತುವೆಯನ್ನು ನೋಡಿದರು. ಅಂಜನ ಪರ್ವತಕ್ಕೆ ಅವರು ಸುಮಾರು ೯:೦೦ಗಂಟೆಗೆ ತಲುಪಿದರು. ಅಲ್ಲಿ ಸಂಚಾಲಕರು ಎಲ್ಲ ಯುವಕ ಮತ್ತು ಯುವತಿಯರನ್ನು ೪ ತಂಡಗಳನ್ನಾಗಿ ವಿಂಗಡಿಸಿದರು ಮತ್ತು ಅವುಗಳಿಗೆ ಒಂದೊಂದು ಹೆಸರಿಟ್ಟರು ಹಾಗೂ ಪ್ರತಿಯೊಂದು ತಂಡಕ್ಕೂ ಒಂದೊಂದು ಕಾರ್ಯಗಳನ್ನು ನೀಡಿದರು. ನಮ್ಮ ನಾಯಕನ ತಂಡಕ್ಕೆ ಇಮ್ಮಡಿ ಪುಲಕೇಶಿ ಎಂಬ ಹೆಸರಿಟ್ಟರು ಮತ್ತು ಅವನ ತಂಡದಲ್ಲಿ ಕರಿಯಪ್ಪ, ನೀಪುಣ, ಅನಿಕೇತನರಿದ್ದರು. ಅವರಿಗೆ ಅಲ್ಲಿಯ ಗಿಡ ಮರಗಳ ಬಗ್ಗೆ ಮಾಹಿತಿಯನ್ನು ಪಡೆಯಲು ಹೇಳಿದ್ದರು. ಅದೇ ರೀತಿಯಾಗಿ ಅವರು ತಮ್ಮ ಚಟುವಟಿಕೆಯನ್ನು ಮಾಡುತ್ತಾ ಅಂಜನ ಪರ್ವತವನ್ನು ಹತ್ತೀದರು. ಈ ಪರ್ವತ ತ್ರೇತಾಯುಗಕ್ಕೆ ಸಂಬಂಧ ಪಟ್ಟ ಪರ್ವತವಾಗಿದ್ದು ಇಲ್ಲಿ ಕಪೀಶ್ವರನ ತಾಯಿಯಾದ ಅಂಜನದೇವಿ ಇಲ್ಲಿ ಅವನಿಗೆ ಜನ್ಮನೀಡಿದ್ದಳು, ಆತನೆ ಮುಂದೆ ಶಶ್ವತಾಯ ಮತ್ತು ದಶಾನನರ ನಡುವಿನ ಯುದ್ಧದಲ್ಲಿ ಶಶ್ವತಾಯನ ಪರವಾಗಿ ಹೋರಾಡಿದನು ಮತ್ತು ಅವನ

ಪರಮಭಕ್ತನಾದನು. ಈ ಪರ್ವತದಲ್ಲಿ ಆತನ ದೇವಾಲಯವಿದೆ ಮತ್ತು ಈ ಪರ್ವತದ ಮೇಲಿಂದ ವಿದ್ಯಾರಣ್ಯಪುರದ ವಿಜಯ ಪಾಂಡುರಂಗನ ಮಂದಿರದ ಸಮುಚ್ಚ ಮತ್ತು ಪಂಪಾನದಿಗಳು ತುಂಬಾ ಸುಂದರವಾಗಿ ಅವರಿಗೆ ಕಂಡವು. ಪರ್ವತದ ಸೌದರ್ಯವನ್ನು ಕಂಡು ಅವರು ಕೆಳಗೆ ಬಂದರು, ಅಲ್ಲಿ ಗ್ರಂಥಪಾಲಕರು ನಾಯಕನಿಗೆ ಒಂದು ಮರವನ್ನು ತೋರಿಸಿ ಅದು ಯಾವ ಮರ ಎಂದು ಕೇಳಿದರು, ಆಗ ನಮ್ಮ ನಾಯಕ ಅದು ಜಂಬೂಹಣ್ಣಿನ ಮರವೆಂದು ಉತ್ತರ ನೀಡಿದನು, ಅದು ಸರಿಯಾದ ಉತ್ತರವಾಗಿತ್ತು. ಮುಂದೆ ಎಲ್ಲರೂ ವಾಹನದಲ್ಲಿ ಬಂದು ಕುಳಿತರು, ಅಂಜನ ಪರ್ವತದಿಂದ ಮತ್ತೆ ಅವರು ವಿದ್ಯಾರಣ್ಯಪುರ ಸಾಮ್ರಾಜ್ಯದ ಮೊದಲ ರಾಜಧಾನಿಯಾದ ಕುಂಜರಗುಂಡಕ್ಕೆ ಪ್ರಯಾಣ ಮಾಡಿದರು. ಕುಂಜರಗುಂಡದಲ್ಲಿ ಅವರು ಅಲ್ಲಿನ ರಾಜರ ಅರಮನೆಯನ್ನು ಮತ್ತು ಅಲ್ಲಿಯ ಕೆಲ ಸ್ಮಾರಕಗಳನ್ನು ನೋಡಿ ಮುಂದೆ ಅವರು ವಿದ್ಯಾರಣ್ಯಪುರದ ಕಡೆಗೆ ಪ್ರಯಾಣ ಮಾಡಿ ಪಂಪಾನದಿಯ ಸೇತುವೆಯನ್ನು ದಾಟಿದರು ಮತ್ತು ಮಾರ್ಗದ ಮಧ್ಯದಲ್ಲಿ ಅವರು ಬುಕ್ಕಸಮುದ್ರದಲ್ಲಿನ ಒಂದು ಐತಿಹಾಸಿಕವಾಗಿ ಪ್ರಸಿದ್ಧವಾದ ನಾಗದೇವತೆಯ ದೇವಾಲಯದ ಆವರಣದಲ್ಲಿನ ಬನ್ನಿಮರದ ಕಟ್ಟೆಯಲ್ಲಿ ಎಲ್ಲರೂ ತಾವು ತಂದಿದ್ದ ಆಹಾರವನ್ನು ಅಲ್ಲಿ ಇಟ್ಟರು ಆ ಆಹಾರವನ್ನು ಯುವತಿಯರ ತಂಡದ ನಾಯಕಿಯಾದ ನೂರವ್ವ ಮತ್ತು ಅವಳ ಗೆಳತಿಯರು ಸೇರಿ ಎಲ್ಲರಿಗೂ ಆಹಾರವನ್ನು ನೀಡತೊಡಗಿದರು ಅಲ್ಲಿ ಅವರು ಮೊದಲು ಲೀಲಾ ಪ್ರಾಧ್ಯಾಪಕಿಯರು ತಂದ ಸಿರಾವನ್ನು ಬಡಸಿದರು, ಆದರೆ ಆಗ ನಮ್ಮ ಕಥಾ ನಾಯಕನಿಗೂ ಮತ್ತು ನೂರವ್ವಳ ಗೆಳತಿಯಾದ ತಾಳ್ಮೆಯಕ್ಕಳ ನಡುವೆ ವಾಗ್ವಾದ ನಡೆಯಿತು ಏಕೆಂದರೆ ನಮ್ಮ ನಾಯಕನಿಗೆ ಪ್ರಾಧ್ಯಾಪಕಿಯರು ತಂದ ಸಿರಾ ಬಹಳ ಇಷ್ಟವಾಯಿತು ಅವನು ಆ ತರಹದ ಸಿರಾವನ್ನು ಎಂದು ಸೇವನೆ ಮಾಡಿದ್ದಿಲ್ಲ ಅದಕ್ಕಾಗಿ ಅವನು ಕೇವಲ ಸಿರಾವನ್ನೆ ಬೇಡುತ್ತಿದ್ದನು, ಆ ಸಿರಾವನ್ನು ತಾಳ್ಮೆಯಕ್ಕ ಬಡಸುತ್ತೀದ್ದಳು. ಪದೆ ಪದೆ ಸಿರಾವನ್ನೆ ಬೇಡುತ್ತಿದ್ದ ನಾಯಕನಿಗೆ ಅವಳು: "ನೀನು ಪದೆ ಪದೆ ಸಿರಾವನ್ನು ಕೇಳಬೇಡ, ಸಿರಾ ಅಷ್ಟು ಇಷ್ಟವಾಗಿದ್ದರೆ ಒಂದೆ ಸಮನೆ ಹಾಕಿಸಿಕೊ ಎಂದಳು". ಆಗ ನಾಯಕ ಅವಳಿಗೆ ಈ ರೀತಿಯಾಗಿ : " ಅಕ್ಕ ನಾನೂ ಅಪರೂಪಕ್ಕ ಇಷ್ಟಪಟ್ಟು ಸಿರಾವನ್ನ ತೀನಾಕತ್ತಿನಿ, ಬೇಕಾದರ ನನಗ ನೀ ಸಿರಾವನ್ನ ಬಡಿಸು ಆದರ ನೀನು ಸುಮ್ಮನ ನನಗ ಸಿಟ್ಟ ಬರಸಬ್ಯಾಡ" ಎಂದು ಹೇಳಿದ ಆಗ ಇವರಿಬ್ಬರ ವಾಗ್ವಾದವನ್ನು ಕೇಳಿದ ನೂರವ್ವ ನಾಯಕನಿಗೆ ಸಮಾಧಾನ ಮಾಡಿ ತಾಳ್ಮೆಯಕ್ಕನ ಕಡೆಯಿಂದ ಸಿರಾದ ಪಾತ್ರೆಯನ್ನು ತಗೊಂಡು ಅವನಿಗೆ ಸಿರಾವನ್ನು ಬಡಿಸಿದಳು.

ತಪ್ಪಿ ಕಾವಲುಗಾರ ಎಂದು ಕರೆದರು. ಅಲ್ಲಿ ಎಲ್ಲರೂ ಸಂಗೀತ ಕಾರಂಜಿಯನ್ನು ನೋಡಿ ಉದ್ಯಾನವನದಲ್ಲಿ ಕುಳಿತು ಕೊಂಡರು. ಅಲ್ಲಿ ಸಂಚಾಲಕರಾದ ಆನಂದ ಪ್ರಾಧ್ಯಾಪಕರು ಎಲ್ಲರಿಗೂ ಚಾರಣ ತಮ್ಮ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಲು ಹೇಳಿದರು, ಅದರಂತೆ ಎಲ್ಲರೂ ಕೂಡಾ ಅವರವರ ಅನಿಸಿಕೆಯನ್ನು ಹೇಳಿದರು ಮತ್ತು ನಮ್ಮ ನಾಯಕನು ಕೂಡಾ ತನ್ನ ಅಭಿಪ್ರಾಯ ಹೇಳಿದನು. ಎಲ್ಲರೂ ತಮ್ಮ ಅನಿಸಿಕೆ ಹೇಳಿ ಉದ್ಯಾನವನದಿಂದ ವಾಹನ ನಿಂತಿದ್ದ ಜಾಗಕ್ಕೆ ಬಂದು ಅಲ್ಲಿ ರಾತ್ರಿಯ ಊಟ ಮಾಡಿದರು, ಊಟದ ಜೊತೆ ಎಲ್ಲರೂ ನಮ್ಮ ನಾಯಕ ಮಾಡಿಕೊಂಡು ಬಂದ ಪಾಕದ ಉಂಡೆಯನ್ನು ಸೇವನೆ ಮಾಡಿದರು. ಆದರೆ ನೂರಪ್ಪ ಮತ್ತು ಮಹಾಂತನಿಗೆ ಸ್ವಲ್ಪ ಉಂಡೆಗಳು ಸಿಕ್ಕವು. ಊಟ ಮುಗಿದ ನಂತರ ಅವರು ರಾತ್ರಿ ೯:೩೦ರ ಸುಮಾರಿಗೆ ನಾಗಲಾಪುರದಿಂದ ಪೊನ್ನಗುಂಡದ ಕಡೆ ಪ್ರಯಾಣ ಬೆಳೆಸಿದರು.

ಅವರು ರಾತ್ರಿ೧೧ಗಂಟೆಯ ಸುಮಾರಿಗೆ ಘಟ್ಟಿಕಾಸ್ಥಾನದ ಮುಂದೆ ವಾಹನ ಬಂದಿತು, ಅಲ್ಲಿಂದ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋದರು.

ಈ ಕಥೆಯ ನಾಯಕನ ಹೆಸರೆನೆಂದರೆ " ಪೆದ್ದನ ತರ ಕಾಣುವ ಅವನು ಪೆದ್ದನಲ್ಲ, ಸಿಟ್ಟಿಗನ ಹಾಗೆ ಕಾಣಿಸುವುದಿಲ್ಲವಾದರು ಸ್ವಲ್ಪ ಸಿಟ್ಟಿಗ, ಆದರೆ ಅವನು ಎಲ್ಲರಿಗೂ ಪ್ರೀಯನು ಆದ ಅವನ ನಾಮದಯ ಅಲ್ಲಮ"

ಮುಂದೆ ಅವನು ತನ್ನ ಚಾರಣದ ಅನುಭವ ಬಗ್ಗೆ ಸಂಚಾಲಕರಿಗೆ ಒಂದು ವರದಿಯನ್ನು ನೀಡುತ್ತಾನೆ.

ಅವರು ಪ್ರಯಾಣ ಮಾಡಿದ ಸ್ಥಳಗಳೆಂದರೆ.

೧. ಅಂಜನ ಪರ್ವತ

೨. ಕುಂಜರಗುಂಡ

೩. ಬುಕ್ಕಸಮುದ್ರ

೪. ವಿದ್ಯಾರಣ್ಯಪುರ

೫. ನಾಗಲಾಪುರ

ಈ ಕಥೆಯನ್ನು ಬರೆದವನು

ಬಸವಪ್ರಭು ಗಾಣಿಗೇರ

## ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ

ಹುನಗುಂದ – ೫೮೭೧೧೮

ತಾ॥ ಹುನಗುಂದ ಜಿಲ್ಲೆ: ಬಾಗಲಕೋಟೆ

ಐಕ್ಯೂಎಸಿ ಸಹಯೋಗದೊಂದಿಗೆ

### ಭಗತಸಿಂಗ ರೋವರ್ಸ್ ಮತ್ತು ರಾಣಿ ಚನ್ನಮ್ಮ ರೇಂಜರ್ಸ್ ಘಟಕಗಳ ಒಂದು ದಿನದ ಚಾರಣ

೨೦೨೧–೨೨

- ನಾಯಕರ ಹೆಸರು : ಎಸ್.ಆರ್.ನಾಗಣ್ಣವರ ಸರ್
- ತಂಡದ ಹೆಸರು : ಭಗತಸಿಂಗ
- ತಂಡದ ಸದಸ್ಯರ ಹೆಸರು : ಬಸವಪ್ರಭು,ಕನಕಪ್ಪ,ಚೇತನ ಮತ್ತು ಪ್ರವೀಣ
- ತಂಡದ ಕಾರ್ಯಚಟುವಟಿಕೆಗಳು: ಎಲೆಗಳನ್ನು ಆರಿಸುವುದು ಮತ್ತು ಕಂಬಗಳನ್ನು ಎಣಿಸುವದು
- ಚಾರಣ ಮಾಡಿದ ಸ್ಥಳಗಳು: ಅಂಜನಾದ್ರಿ ಬೆಟ್ಟ,ಆನೆಗುಂದಿ,ಬುಕ್ಕಸಾಗರ ಹಾಗೂ ಹಂಪಿ ಮತ್ತು ತುಂಗಭದ್ರ ಆಣೆಕಟ್ಟು.

ಸಹಿ.

## ಸ್ಕೌಟಿನ ಒಂದು ದಿನದ ಚಾರಣ

ನಮ್ಮ ವಿ.ಎಮ್.ಎಸ್.ಆರ್ ವಸ್ತ್ರದ ಕಲಾ,ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಪದವಿ ಮಹಾವಿದ್ಯಾಲಯ, ಹುನಗುಂದ ಐಕ್ಯೂಎಸಿ ಸಹಯೋಗದೊಂದಿಗೆ ಭಗತಸಿಂಗ ರೋವರ್ಸ್ ಮತ್ತು ರಾಣಿ ಚನ್ನಮ್ಮ ರೇಂಜರ್ಸ್ ಘಟಕಗಳ ವಾರ್ಷಿಕ ಬೇಸಿಗೆ ಶಿಬಿರವನ್ನು ದಿನಾಂಕ ೧೬.೦೬.೨೦೨೨ ರಿಂದ ೨೦.೦೬.೨೦೨೨ ರ ವರೆಗೆ ಮಹಾವಿದ್ಯಾಲಯದ ಆವರಣದಲ್ಲಿ ನಡೆಯಿತು. ಮೊದಲ ದಿನವಾದ ೧೬ ತಾರೀಖಿನಂದು ಶಿಬಿರದ ಉದ್ಘಾಟನಾ ಸಮಾರಂಭವಾಯಿತು. ಆ ಸಮಾರಂಭದಲ್ಲಿ ಹುನಗುಂದದ ಪಿ.ಎಸ್.ಐ ಆದ ಸಂಗನಗೌಡ ಗೌಡ್ರ ಹಾಗೂ ಬಾಗಲಕೋಟೆ ಜಿಲ್ಲೆಯ ಸ್ಕೌಟ ಮತ್ತು ಗೈಡ್ಸ್‌ನ ಕಾರ್ಯದರ್ಶಿಗಳು ಆದ ಚಂದ್ರಶೇಖರ ಸಾವಳಗಿಯವರು ಮತ್ತು ಸ್ಕೌಟ ಮತ್ತು ಗೈಡ್ಸ್‌ನ ಸಂಘಟನಾ ಕಾರ್ಯದರ್ಶಿಗಳಾದ ಪ್ರಮೋದ ಚೌಗಲೆಯವರು ಈ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ೧೭ನೇ ತಾರೀಖಿನಂದು ನಮ್ಮಗೆ ಪ್ರಥಮ ಚಿಕಿತ್ಸೆ ಬಗ್ಗೆ ಡಾ॥ ಪ್ರಶಾಂತ ತುಂಬಗಿಯವರು ಮಾಹಿತಿ ನೀಡಿದರು. ೧೮ನೇ ತಾರೀಖಿನಂದು ಎಂ.ಜಿ.ವಿ.ಸಿ.ಮಹಾವಿದ್ಯಾಲಯದ ಉಪನ್ಯಾಸಕರಾದ ಪ್ರೊ. ಎಸ್.ಎಸ್.ಹೂಗಾರರು ನಮ್ಮಗೆ ನಕಾಶೆಯನ್ನು ಗುರುತಿಸುವುದನ್ನು ಹೇಳಿಕೊಟ್ಟರು. ಅದೆ ದಿನ ಸಂಜೆ ೭ ಗಂಟೆಗೆ fire camp ನ್ನು ಮಾಡಿದೆವು. ೧೯ನೇ ತಾರೀಖಿನಂದು ಒಂದು ದಿನದ ಚಾರಣ ಇತ್ತು ಆದಕಾರಣ ಮುಂಜಾನೆ ೫ ಗಂಟೆಗೆ ಮಹಾವಿದ್ಯಾಲಯದ ಆವರಣದಲ್ಲಿ ಬರಬೇಕೆಂದು ನಾಗಣ್ಣವರ ಸರ್ ಹೇಳಿದ್ದರು ಆದರೆ ನಾನು ತಡವಾಗಿ ಬಂದೆನು. ಮಹಾವಿದ್ಯಾಲಯದಿಂದ ಖಾಸಗಿ ಬಸ್ಸು ೫:೪೦ ರ ಸುಮಾರಿಗೆ ಅಂಜನಾದ್ರಿಯ ಕಡೆಗೆ ಪ್ರಯಾಣ ನಡೆಯಿತು. ಮಾರ್ಗದ ಮಧ್ಯ ೮:೩೦ರ ಸುಮಾರಿಗೆ ಗಂಗಾವತಿ ಕ್ರಾಸನಲ್ಲಿನ ಸಾಗರ ಹೋಟೆಲನಲ್ಲಿ ಬೆಳ್ಳಗಿನ ಉಪಹಾರವನ್ನು ಸೇವನೆ ಮಾಡಿ ಅಲ್ಲಿಂದ ಮತ್ತೆ ಅಂಜನಾದ್ರಿಯ ಕಡೆಗೆ ಪ್ರಯಾಣ ಮುಂದುವರೆಯಿತ್ತು. ಮಾರ್ಗದಲ್ಲಿ ನಾವು ಸುಂದರವಾದ ಭತ್ತದ ಹೊಲಗಳು, ವಿವಿಧ ರೀತಿಯ ಬಂಡೆಗಳನ್ನು ಒಳಗೊಂಡ ಸುಂದರವಾದ ಬೆಟ್ಟಗಳನ್ನು ನೋಡಿದೆವು. ಅಂಜನಾದ್ರಿಯ ಹತ್ತಿರದ ಹನುಮನಹಳ್ಳಿಯಲ್ಲಿ ವಿಜಯನಗರ ಕಾಲದ ಸೇತುವೆಯನ್ನು ನೋಡಿದೆವು. ಅಂಜನಾದ್ರಿಗೆ ಮುಂಜಾನೆ ೯:೪೦ರ ಸುಮಾರಿಗೆ ಬಂದೆವು ಆಗ ನಮ್ಮ ರೋವರ್ಸ ತಂಡದ ನಾಯಕರಾದ ನಾಗಣ್ಣವರ ಸರ್ ಎಲ್ಲ ರೋವರ್ಸ್ ಮತ್ತು ರೇಂಜರ್ಸ್‌ರನ್ನು ೪ ಮಂದಿ ಕೂಡಿದ ತಂಡಗಳನ್ನಾಗಿ ಮಾಡಿ ಅವರಿಗೆ ಕೆಲವೊಂದು ಚಟುವಟಿಕೆಗಳನ್ನು ನೀಡಿದರು. ಪ್ರತಿಯೊಂದು

ತಂಡಕ್ಕೂ ಒಂದೊಂದು ಹೆಸರನ್ನು ಇಟ್ಟರು, ನಮ್ಮ ತಂಡಕ್ಕೆ ಭಗತಸಿಂಗ ಎಂಬ ಹೆಸರಿಡಲಾಯಿತ್ತು. ನಮ್ಮ ತಂಡದಲ್ಲಿ ನಾನು ಅಂದರೆ ಬಸವಪ್ರಭು, ಕನಕಪ್ಪ, ಚೇತನ ಮತ್ತು ಪ್ರವೀಣ ಇದ್ದೆವು. ನಮ್ಮ ತಂಡಕ್ಕೆ ಅಂಜನಾದ್ರಿ ಬೆಟ್ಟದಲ್ಲಿನ ಮರಗಳ ಎಲೆಗಳನ್ನು ಸಂಗ್ರಹಿಸಲು ಮತ್ತು ಅಲ್ಲಿನ ಸ್ಮಾರಕಗಳಲ್ಲಿನ ಕಂಬಗಳನ್ನು ಎಣಿಸಲು ಹೇಳಿದರು. ಅದೆ ರೀತಿಯಾಗಿ ನಾವು ಅಲ್ಲಿನ ಮರಗಿಡಗಳ ಎಲೆಗಳನ್ನು ಸಂಗ್ರಹಿಸುತ್ತಾ ಅಂಜನಾದ್ರಿ ಬೆಟ್ಟವನ್ನು ಹತ್ತಲು ಹೊರಟೆವು ಅಲ್ಲಿ ನಮ್ಮ ಕಾಲೇಜಿನ ಗೆಳೆಯರು ನಮಗೆ ಭೇಟಿಯಾದರು. ಅಂಜನಾದ್ರಿ ಬೆಟ್ಟವು ರಾಮಾಯಣದ ಕಾಲದಲ್ಲಿ ಹನುಮಂತನ ಜನ್ಮಸ್ಥಳವಾಗಿದೆ, ಇಲ್ಲಿ ಹನುಮಂತನ ತಾಯಿ ಅಂಜನಾದೇವಿಯು ಈ ಬೆಟ್ಟದಲ್ಲಿ ಹನುಮಂತನನ್ನು ಜನ್ಮನೀಡಿದಳು ಆದ ಕಾರಣ ಈ ಬೆಟ್ಟಕ್ಕೆ ಅಂಜನಾದ್ರಿ ಎಂಬ ಹೆಸರು ಬಂದಿದೆ.

ಈ ಬೆಟ್ಟದ ಮೇಲೆ ಹನುಮಂತನ ಮಂದಿರವಿದೆ. ಈ ಬೆಟ್ಟವನ್ನು ಹತ್ತಲು ೫೭೫ ಮೆಟ್ಟಿಲುಗಳಿವೆ. ಬೆಟ್ಟವನ್ನು ಹತ್ತುವಾಗ ನಾವು ನೇರಳೆಮರ, ಬೇವಿಮರ, ಬಿದಿರಿನಮರ, ಪಾರಿಜಾತ ಗಿಡ, ತುಳಸಿಗಿಡಗಳನ್ನು ನೋಡಿದೆವು.

ಬೆಟ್ಟದ ಮೇಲಿನಿಂದ ಹಂಪಿಯ ವಿರೂಪಾಕ್ಷ ದೇವಾಲಯ, ಮಾತಂಗ ಪರ್ವತ, ಅಚುತ್ಯರಾಯ ದೇವಾಲಯ ಹಾಗೂ ವಿಜಯ ವಿಠ್ಠಲ ದೇವಾಲಯ ಮತ್ತು ಜಗತ್ತಪ್ರಸಿದ್ಧ ಕಲ್ಲಿನ ರಥಗಳು ಬಹಳ ಸುಂದರವಾಗಿ ಕಾಣಿದವು. ಅದೆ ರೀತಿಯಾಗಿ ಅಲ್ಲಿನ ಭತ್ತ ಮತ್ತು ಬಾಳೆಹಣ್ಣಿನ ಗದ್ದೆಗಳು ಮತ್ತು ತೆಂಗಿನ ಮರಗಳು ತುಂಬಾ ಚೆನ್ನಾಗಿ ಕಂಡವು. ಬೆಟ್ಟದಲ್ಲಿನ ಹನುಮಂತನ ದೇವಾಲಯದಲ್ಲಿ ಒಟ್ಟು ೩ ದೇವಾಲಯಗಳಿವೆ, ೧ ಮಾರುತಿಯ ದೇವಾಲಯ ೨ ಶ್ರೀರಾಮನ ದೇವಾಲಯ ೩ ಅಂಜನಾದೇವಿಯ ದೇವಾಲಯವಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಈ ದೇವಾಲಯದಲ್ಲಿ ಒಟ್ಟು ೨೪ ಕಂಬಗಳಿವೆ. ಈ ಬೆಟ್ಟದಲ್ಲಿ ನಾವು ಮತ್ತು ಎಲ್ಲ ರೋವರ್ಸ್ ಮತ್ತು ರೇಂಜರ್ಸ್ ಗಳು ಫೋಟೊ ತೆಗೆಸಿಕೊಂಡೆವು ಮತ್ತು ಅಲ್ಲಿ ನಮ್ಮಗೆ ಅಥಣಿಯ ಒಂದು ಕಾಲೇಜಿನ ಸ್ಕೌಟ ಮತ್ತು ಗೈಡ್ಸ್‌ನ ಸಂಚಾಲಕರು ನಮ್ಮಗೆ ಸ್ಕೌಟನ ಬಗ್ಗೆ ಮಾಹಿತಿಯನ್ನು ನೀಡಿದರು. ೧೧:೪೦ ರ ಸುಮಾರಿಗೆ ಬೆಟ್ಟದಿಂದ ಇಳಿದು ಬಂದೆವು.

ಅಂಜನಾದ್ರಿಯಿಂದ ನಾವು ಅಲ್ಲಿಂದ ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿಯಾದ ಆನೆಗುಂದಿಗೆ ಹೋದೆವು ಅಲ್ಲಿ ನಾವು ಹೋದಾಗ ೧೨:೧೦ ಆಗಿತ್ತು. ಅಲ್ಲಿ ನಾವು ಆನೆಗುಂದಿಯಲ್ಲಿ ಅರಮನೆ, ಶ್ರೀಕೃಷ್ಣದೇವರಾಯನ ಸಮಾಧಿ,

ಅಲ್ಲಿನ ಪ್ರಮುಖ ಬೀದಿಗಳನ್ನು ಮತ್ತು ಗಗನಮಹಲನ್ನು ನೋಡಿದೆವು. ಅಲ್ಲಿಂದ ನಾವು ೧೨:೫೦ರ ಸುಮಾರಿಗೆ ಹಂಪಿಯ ಕಡೆಗೆ ಪ್ರಯಾಣ ಬೆಳೆಸಿದೆವು. ಮಾರ್ಗದ ಮಧ್ಯ ಬುಕ್ಕಸಾಗರದಲ್ಲಿನ ಏಳುಹೆಡೆ ನಾಗಪ್ಪನ ದೇವಾಲಯದ ಆವರಣದಲ್ಲಿ ಇದ್ದ ಬನ್ನಿಮರದ ಕಟ್ಟೆಯಲ್ಲಿ ೧:೨೦ ರ ಸುಮಾರಿಗೆ ಊಟಕ್ಕೆ ಕುಳಿತೆವು ಅಲ್ಲಿ ಎಲ್ಲ ರೋವರ್ಸ್ ಮತ್ತು ರೇಂಜರ್ ರು ತಾವು ತಯಾರಿಸಿದ ಆಹಾರವನ್ನು ಸೇವನೆ ಮಾಡಿದರು. ಅದರಲ್ಲಿ ನಾನು ಗುಲಾಬ ಜಾಮುನ ಮತ್ತು ಮಡಿಕೆ ಕಾಳು ಪಲ್ಯಯನ್ನು ತಂದಿದೆನು. ೨:೫ಕ್ಕೆ ನಮ್ಮ ಊಟ ಮುಗಿಸಿದೆವು ಮತ್ತು ನಾಗಪ್ಪನ ದರ್ಶನವನ್ನು ಪಡೆದು ಅಲ್ಲಿಂದ ಮತ್ತೆ ಹಂಪಿಯ ಕಡೆ ಪ್ರಯಾಣ ನಡೆಸಿದೆವು. ಮೊದಲು ನಾವು ವಿಜಯ ವಿಠ್ಠಲ ದೇವಾಲಯಕ್ಕೆ ಹೋದೆವು, ಆದರೆ ಅಲ್ಲಿ ನಾನು ತಂದ ಜಾಮುನು ಬಸ್‌ನಲ್ಲಿ ಸೋರಿಕೆಯಾಗಿತ್ತು ಅದನ್ನು ನಾನು ಸ್ವಚ್ಛಮಾಡಿಕೊಂಡು ಬರುವಷ್ಟರಲ್ಲಿ ಎಲ್ಲ ರೋವರ್ಸ್ ಮತ್ತು ರೇಂಜರ್ಸ್ ಸರ್ ಜೊತೆ ನಡೆದುಕೊಂಡು ವಿಠ್ಠಲ ದೇವಾಲಯದ ಮುಂದೆ ನಿಂತಿದ್ದರು. ನಾನು ಕೂಡ ನಡೆದುಕೊಂಡು ಬರುವಷ್ಟರಲ್ಲಿ ತಡವಾಯಿತು. ದೇವಾಲಯದ ಟೀಕೆಟನ್ನು ಸರ್ ಪಡೆದುಕೊಂಡಿದ್ದರು. ಅಲ್ಲಿ ನಮ್ಮಗೆ ಒಬ್ಬ ವೀಕಲಚೇತನ ಗೈಡ ನಮ್ಮಗೆ ವಿಠ್ಠಲ ದೇವಾಲಯದ ಬಗ್ಗೆ ಮಾಹಿತಿಯನ್ನು ನೀಡಿದರು. ವಿಠ್ಠಲ ದೇವಾಲಯವನ್ನು ನೋಡಿಕೊಂಡು ೫:೨೦ರ ಸುಮಾರಿಗೆ ವಿರೂಪಾಕ್ಷ ದೇವಾಲಯದ ಕಡೆ ಪ್ರಯಾಣ ಬೆಳೆಸಿದೆವು. ಸಾಯಂಕಾಲ ೫:೪೦ರ ಸುಮಾರಿಗೆ ವಿರೂಪಾಕ್ಷ ದೇವಾಲಯವನ್ನು ಪ್ರವೇಶ ಮಾಡಿದೆವು ಅಲ್ಲಿ ನಾವು ವಿಜಯನಗರ ಸಾಮ್ರಾಜ್ಯದ ಒಂದು ಅದ್ಭುತ ವಾಸ್ತುಶೈಲಿ ಮತ್ತು ಚಿತ್ರಕಲೆಯನ್ನು ನೋಡಿದೆವು. ಅಲ್ಲಿ ವಿರೂಪಾಕ್ಷ ದೇವಾಲಯದ ಮುಖಮಂಟಪದ ಮೇಲ್ಭಾಗದಲ್ಲಿ ಪಂಪಾಪತಿ ಕಲ್ಯಾಣದ ಮತ್ತು ಹರಿಹರ ಮತ್ತು ಬುಕ್ಕರಾಯರು ಗುರು ವಿದ್ಯಾರಣ್ಯರನ್ನು ಪಲ್ಲಕ್ಕಿಯಲ್ಲಿ ಹೊತ್ತಿಕೊಂಡು ಹೋಗುತ್ತಿರುವ ದೃಶ್ಯಗಳ ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ದೇವಾಲಯದ ಹಿಂದಿನ ಭಾಗದಲ್ಲಿ ಈ ದೇವಾಲಯದ ರಾಜಗೋಪುರದ ನೆರಳು ಕೆಳಮುಖವಾಗಿ ಕಾಣುವ ದೃಶ್ಯವನ್ನು ನೋಡಿದೆವು. ನಂತರ ನಾವು ೬:೨೦ರ ಸುಮಾರಿಗೆ ಹಂಪಿಯಿಂದ ನಾಗಲಾಪುರದ ಕಡೆಗೆ ಅಂದರೆ ಹೊಸಪೇಟೆಯ ತುಂಗಭದ್ರ ಆಣ್ಣೆಕಟ್ಟಿನ ಕಡೆ ಪ್ರಯಾಣ ಬೆಳೆಸಿದೆವು. ೬:೫೦ ರ ಸುಮಾರಿಗೆ ತುಂಗಭದ್ರ ಆಣ್ಣೆಕಟ್ಟಿನ ವಾಹನ ನಿಲುಗಡೆ ಸ್ಥಳಕ್ಕೆ ಬಂದೆವು. ೭ ಗಂಟೆಗೆ ಟೀಕೆಟ ಪಡೆದುಕೊಂಡು ಉದ್ಯಾನವನದ ಕಡೆ ನಡೆದೆವು ಸರಿಸುಮಾರು ೧ ಗಂಟೆಗಳ ಕಾಲ ಉದ್ಯಾನವನದಲ್ಲಿ ಕಾಲಕಳೆದು ಸಂಗೀತ ಕಾರಂಜಿಯನ್ನು ವಿಕ್ಷಿಸಿ ಉದ್ಯಾನವನದಲ್ಲಿ ನಮ್ಮ ನಾಗಣ್ಣವರ ಸರ್ ಎಲ್ಲ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಒಂದು ದಿನದ ಚಾರಣದ

ಅಭಿಪ್ರಾಯವನ್ನು ಕೇಳಿದರು, ನಾನು ಕೂಡ ಎಲ್ಲರಂತೆ ನನ್ನ ಅಭಿಪ್ರಾಯವನ್ನು ಹೇಳಿದೆನು.ಉದ್ಯಾನವನದಲ್ಲಿ ಐಸ್‌ಕ್ರೀಮ್‌ನ ಸೇವನೆ ಮಾಡಿದೆವು. ಸರಿಸುಮಾರು ೯:೧೦ರ ಸುಮಾರಿಗೆ ಬಸ್ ನಿಂತಿದ ಜಾಗಕ್ಕೆ ಬಂದು ಎಲ್ಲರು ರಾತ್ರಿಯ ಊಟವನ್ನು ಮಾಡಿದೆವು ಮತ್ತು ಎಲ್ಲರು ನಾನು ತಂದ ಜಾಮುನನ್ನು ಸೇವನೆ ಮಾಡಿದರು.

ಹೊಸಪೇಟೆಯಿಂದ ನಾವು ೯:೩೦ರ ಸುಮಾರಿಗೆ ಬಿಟ್ಟು ರಾತ್ರಿ೧೧:೪೫ರ ಸುಮಾರಿಗೆ ಮಹಾವಿದ್ಯಾಲಯದ ಆವರಣಕ್ಕೆ ಬಂದೆವು. ಒಟ್ಟಿನಲ್ಲಿ ಸ್ಕಾಟನ ಬೇಸಿಗೆಯ ಒಂದು ದಿನದ ಚಾರಣ ಬಹಳ ಆನಂದದಾಯಕವಾಗಿತ್ತು, ಎಂಬುದು ನನ್ನ ಅಭಿಪ್ರಾಯ.

## ಅಂಜನಾದ್ರಿ ಬೆಟ್ಟದಲ್ಲಿ ದೊರೆತ ಗಿಡ–ಮರಗಳ ಎಲೆಗಳಲ್ಲಿನ ಪ್ರಮುಖ ಗುಣಗಳು

೧. ಬೇವಿನ ಎಲೆ : ಈ ಮರದ ಎಲೆ ರೋಗನಿರೋಧಕ ಶಕ್ತಿಯನ್ನು ಒಳಗೊಂಡಿದೆ. ಯುಗಾದಿ ಹಬ್ಬದ ದಿನ ಈ ಎಲೆಯ ನೀರಿನಿಂದ ಸ್ನಾನಮಾಡುತ್ತಾರೆ ಏಕೆಂದರೆ ಇದರಲ್ಲಿ ಚರ್ಮರೋಗವನ್ನು ತಡೆಗಟ್ಟುವ ಶಕ್ತಿ ಇದೆ.

೨. ಬಿದಿರು : ಈ ಮರದ ಎಲೆ ಆನೆಗಳಿಗೆ ಬಹಳ ಇಷ್ಟವಾದ ಎಲೆಯಾಗಿದೆ. ಈ ಮರದ ಕಟ್ಟಿಗೆಯಿಂದ ಅನೇಕ ಕರಕೂಶಲ ಕೆಲಸವನ್ನು ಮಾಡುತ್ತಾರೆ. ಉದಾ: ಗೊಂಬೆಗಳನ್ನು, ಏಣಿಗಳನ್ನು ಮಾಡುತ್ತಾರೆ.

೩. ಪಾರಿಜಾತ: ಈ ಮರವು ಹಿಂದೂ ಧರ್ಮದ ಅತ್ಯಂತ ಪವಿತ್ರ ಮರವಾಗಿದೆ. ಈ ಮರದ ಪುಷ್ಪಗಳು ಶ್ವೇತ ವರ್ಣವನ್ನು ಹೊಂದಿರುತ್ತದೆ.


೪. ತುಳಸಿ : ಈ ಗಿಡವು ಕೂಡಾ ಹಿಂದೂಗಳ ಪವಿತ್ರ ಗಿಡವಾಗಿದೆ. ಈ ಗಿಡದ ಎಲೆಗಳಲ್ಲಿ ಅನೇಕ ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. ಇದರಲ್ಲಿ ಅನೇಕ ಪ್ರಕಾರಗಳಿವೆ ಅವುಗಳಲ್ಲಿ ಪ್ರಮುಖವಾದುಗಳೆಂದರೆ ಕೃಷ್ಣ ತುಳಸಿ, ರಾಮ ತುಳಸಿ ಗಿಡಗಳಾಗಿವೆ.

೫. ನೇರಳೆ ಮರ : ಈ ಮರದಲ್ಲಿನ ಹಣ್ಣು ಬಹಳ ರುಚಿಕರವಾಗಿರುತ್ತದೆ. ಈಮರದ ಹಣ್ಣಿನ ಹೆಸರು ನೇರಳೆ ಹಣ್ಣು ಎಂದು ಕರೆಯುತ್ತಾರೆ, ಈ ಹಣ್ಣಿಗೆ ಜಂಬೂಹಣ್ಣು ಎಂದು ಹೆಸರಿದೆ. ನಮ್ಮ ದೇಶಕ್ಕೆ ಮೊದಲು ಜಂಬೂದ್ವೀಪ ಎಂದು ಕರೆಯುತ್ತಿದ್ದರು.

## ಅಂಜನಾದ್ರಿಯಲ್ಲಿ ತೆಗೆಸಿಕೊಂಡ ಫೋಟೋಗಳು



ಮಾರುತಿ ದೇವಾಲಯ(ಅಂಜನಾದ್ರಿ)



ವಿಜಯವಿಠ್ಠಲ ದೇವಾಲಯ(ಹಂಪಿ)



ಬೆಟ್ಟ ಹತ್ತುವಾಗ ತೆಗೆದುಕೊಂಡ ಫೋಟೋ



ವಿರೂಪಾಕ್ಷ ದೇವಾಲಯ(ಹಂಪಿ)





[illegible]



[illegible]



[illegible]



[illegible]

## ವಿರೂಪಾಕ್ಷ ದೇವಾಲಯದಲ್ಲಿನ ಚಿತ್ರಗಳು ಮತ್ತು ಶ್ರೀಕೃಷ್ಣದೇವರಾಯನ ಶಾಸನಗಳ ಫೋಟೋಗಳು



ಪಂಪಾಪತಿ ಕಲ್ಯಾಣ ಮಹೋತ್ಸವದ ಚಿತ್ರಗಳು(ವಿರೂಪಾಕ್ಷ ದೇವಾಲಯ)



ಹರಿಹರ ಮತ್ತು ಬುಕ್ಕರಾಯರು ಗುರು ವಿದ್ಯಾರಣ್ಯರನ್ನು ಪಲ್ಲಕ್ಕಿಯಲ್ಲಿ ಎತ್ತಿಕೊಂಡು ಹೋಗುತ್ತಿರುವ ಚಿತ್ರ



ಶ್ರೀಕೃಷ್ಣದೇವರಾಯನ ಶಾಸನ



1) ಬೇವಿನ ಎಲೆ



2) ತಾಂಬಾಕ ಎಲೆ





3) ರಾಮ ತುಳಸಿ

3.1) ಕೃಷ್ಣ ತುಳಸಿ

ವಿ.ಎಮ್.ಎಸ್.ಆರ್ ವಸ್ತ್ರದ ಕಲಾ,ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಹುನಗುಂದ.

ತಾ॥ ಹುನಗುಂದ ಜಿ॥ ಬಾಗಲಕೋಟೆ



೧. ತಂಡದ ಹೆಸರು: ರಾಣಿ ಕಿತ್ತೂರು ಚೆನ್ನಮ್ಮ

೨. ತಂಡದ ನಾಯಕರು: ಅಮಲಿಕೊಪ್ಪ ಮೇಡಂ

೩. ತಂಡದ ಸದಸ್ಯರ ಹೆಸರು: ಸನಾ, ಐಶ್ವರ್ಯ, ನಿಂಗಮ್ಮ,ಲಿಂಗಮ್ಮ

೪. ಚಟುವಟಿಕೆ: ಬಂಡೆ ಮತ್ತು ಫಲಕಗಳ ವಿಕ್ಷಣೆ

೫. ಚಾರಣ ಮಾಡಿದ ಸ್ಥಳಗಳು: ಅಂಜನಾದ್ರಿ,ಆನೆಗುಂದಿ,ಬುಕ್ಕಸಾಗರ,ಹಂಪಿ,ಹೊಸಪೇಟೆ



ಕಿತ್ತೂರು ರಾಣಿ ಚೆನ್ನಮ್ಮ ತಂಡ

## ಸ್ಕೌಟಿನ ಒಂದು ದಿನದ ಚಾರಣ

ನಮ್ಮ ವಿ.ಎಮ್.ಎಸ್.ಆರ್ ವಸ್ತ್ರದ ಕಲಾ,ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಪದವಿ ಮಹಾವಿದ್ಯಾಲಯ, ಹುನಗುಂದ ಐಕ್ಯೂಎಸಿ ಸಹಯೋಗದೊಂದಿಗೆ ಭಗತಸಿಂಗ ರೋವರ್ಸ್ ಮತ್ತು ರಾಣಿ ಚನ್ನಮ್ಮ ರೇಂಜರ್ಸ್ ಘಟಕಗಳ ವಾರ್ಷಿಕ ಬೇಸಿಗೆ ಶಿಬಿರವನ್ನು ದಿನಾಂಕ ೧೬.೦೬.೨೦೨೨ ರಿಂದ ೨೦.೦೬.೨೦೨೨ ರ ವರೆಗೆ ಮಹಾವಿದ್ಯಾಲಯದ ಆವರಣದಲ್ಲಿ ನಡೆಯಿತು. ಮೊದಲ ದಿನವಾದ ೧೬ ತಾರೀಖಿನಂದು ಶಿಬಿರದ ಉದ್ಘಾಟನಾ ಸಮಾರಂಭವಾಯಿತು. ಆ ಸಮಾರಂಭದಲ್ಲಿ ಹುನಗುಂದದ ಪಿ.ಎಸ್.ಐ ಆದ ಸಂಗನಗೌಡ ಗೌಡ್ರ ಹಾಗೂ ಬಾಗಲಕೋಟೆ ಜಿಲ್ಲೆಯ ಸ್ಕೌಟ ಮತ್ತು ಗೈಡ್ಸ್‌ನ ಕಾರ್ಯದರ್ಶಿಗಳು ಆದ ಚಂದ್ರಶೇಖರ ಸಾವಳಗಿಯವರು ಮತ್ತು ಸ್ಕೌಟ ಮತ್ತು ಗೈಡ್ಸ್‌ನ ಸಂಘಟನಾ ಕಾರ್ಯದರ್ಶಿಗಳಾದ ಪ್ರಮೋದ ಚೌಗಲೆಯವರು ಈ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ೧೭ನೇ ತಾರೀಖಿನಂದು ನಮ್ಮಗೆ ಪ್ರಥಮ ಚಿಕಿತ್ಸೆ ಬಗ್ಗೆ ಡಾ॥ ಪ್ರಶಾಂತ ತುಂಬಗಿಯವರು ಮಾಹಿತಿ ನೀಡಿದರು. ೧೮ನೇ ತಾರೀಖಿನಂದು ಎಂ.ಜಿ.ವಿ.ಸಿ.ಮಹಾವಿದ್ಯಾಲಯದ ಉಪನ್ಯಾಸಕರಾದ ಪ್ರೊ. ಎಸ್.ಎಸ್.ಹೂಗಾರರು ನಮ್ಮಗೆ ನಕಾಶೆಯನ್ನು ಗುರುತಿಸುವುದನ್ನು ಹೇಳಿಕೊಟ್ಟರು. ಅದೆ ದಿನ ಸಂಜೆ ೭ ಗಂಟೆಗೆ fire camp ನ್ನು ಮಾಡಿದೆವು. ೧೯ನೇ ತಾರೀಖಿನಂದು ಒಂದು ದಿನದ ಚಾರಣ ಇತ್ತು ಆದಕಾರಣ ಮುಂಜಾನೆ ೫ ಗಂಟೆಗೆ ಮಹಾವಿದ್ಯಾಲಯದ ಆವರಣದಲ್ಲಿ ಬರಬೇಕೆಂದು ನಾಗಣ್ಣವರ ಸರ್ ಹೇಳಿದ್ದರು ಆದರೆ ನಾನು ತಡವಾಗಿ ಬಂದೆನು. ಮಹಾವಿದ್ಯಾಲಯದಿಂದ ಖಾಸಗಿ ಬಸ್ಸು ೫:೪೦ ರ ಸುಮಾರಿಗೆ ಅಂಜನಾದ್ರಿಯ ಕಡೆಗೆ ಪ್ರಯಾಣ ನಡೆಯಿತು. ಮಾರ್ಗದ ಮಧ್ಯ ೮:೩೦ರ ಸುಮಾರಿಗೆ ಗಂಗಾವತಿ ಕ್ರಾಸನಲ್ಲಿನ ಸಾಗರ ಹೋಟೆಲನಲ್ಲಿ ಬೆಳಗಿನ ಉಪಹಾರವನ್ನು ಸೇವನೆ ಮಾಡಿ ಅಲ್ಲಿಂದ ಮತ್ತೆ ಅಂಜನಾದ್ರಿಯ ಕಡೆಗೆ ಪ್ರಯಾಣ ಮುಂದುವರೆಯಿತ್ತು. ಮಾರ್ಗದಲ್ಲಿ ನಾವು ಸುಂದರವಾದ ಭತ್ತದ ಹೊಲಗಳು, ವಿವಿಧ ರೀತಿಯ ಬಂಡೆಗಳನ್ನು ಒಳಗೊಂಡ ಸುಂದರವಾದ ಬೆಟ್ಟಗಳನ್ನು ನೋಡಿದೆವು. ಅಂಜನಾದ್ರಿಯ ಹತ್ತಿರದ ಹನುಮನಹಳ್ಳಿಯಲ್ಲಿ ವಿಜಯನಗರ ಕಾಲದ ಸೇತುವೆಯನ್ನು ನೋಡಿದೆವು. ಅಂಜನಾದ್ರಿಗೆ ಮುಂಜಾನೆ ೯:೪೦ರ ಸುಮಾರಿಗೆ ಬಂದೆವು ಆಗ ನಮ್ಮ ರೋವರ್ಸ ತಂಡದ ನಾಯಕರಾದ ನಾಗಣ್ಣವರ ಸರ್ ಎಲ್ಲ ರೋವರ್ಸ್ ಮತ್ತು ರೇಂಜರ್ಸ್‌ರನ್ನು ೪ ಮಂದಿ ಕೂಡಿದ ತಂಡಗಳನ್ನಾಗಿ ಮಾಡಿ ಅವರಿಗೆ ಕೆಲವ್ರೊಂದು ಚಟುವಟಿಕೆಗಳನ್ನು ನೀಡಿದರು. ಪ್ರತಿಯೊಂದು

ತಂಡಕ್ಕೂ ಒಂದೊಂದು ಹೆಸರನ್ನು ಇಟ್ಟರು, ನಮ್ಮ ತಂಡಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ಹೆಸರು ನೀಡಿದರು, ನಮ್ಮ ತಂಡದಲ್ಲಿ ನಾನು ಅಂದರೆ ಸನಾ, ಐಶ್ವರ್ಯ, ನೀಲಮ್ಮ ಮತ್ತು ಲಿಂಗಮ್ಮ ಇದ್ದೆವು ಮತ್ತು ನಮ್ಮ ತಂಡಕ್ಕೆ ಅಲ್ಲಿನ ಫಲಕ ಹಾಗೂ ಬಂಡೆಗಳ ಮಾಹಿತಿಯನ್ನು ಪಡೆಯ ಬೇಕೆಂದು ಹೇಳಿದ್ದರು. ಅದೆ ರೀತಿಯಾಗಿ ನಾವು ಅಲ್ಲಿನ ವಿವಿಧ ರೀತಿಯ ಬಂಡೆಗಳನ್ನು ನೋಡಿದೆವು.ಈ ಅಂಜನಾದ್ರಿ ಬೆಟ್ಟವು ರಾಮಾಯಣದ ಕಾಲದಲ್ಲಿ ಹನುಮಂತನ ಜನ್ಮಸ್ಥಳವಾಗಿದೆ, ಇಲ್ಲಿ ಹನುಮಂತನ ತಾಯಿ ಅಂಜನಾದೇವಿಯು.ಈ ಬೆಟ್ಟದಲ್ಲಿ ಹನುಮಂತನನ್ನು ಜನ್ಮನೀಡಿದಳು ಆದ ಕಾರಣ ಈ ಬೆಟ್ಟಕ್ಕೆ ಅಂಜನಾದ್ರಿ ಎಂಬ ಹೆಸರು ಬಂದಿದೆ ಎಂದು ಬೆಟ್ಟದ ಮೇಟ್ಟಿಲುಗಳ ಬಳಿ ಇರುವ ಒಂದು ಫಲಕದಲ್ಲಿದೆ. ಈ ಬೆಟ್ಟದ ಮೇಲೆ ಹನುಮಂತನ ಮಂದಿರವಿದೆ. ಈ ಬೆಟ್ಟವನ್ನು ಹತ್ತಲು ೫೭೫ ಮೇಟ್ಟಿಲುಗಳಿವೆ.ಬೆಟ್ಟದ ಮೇಲಿನಿಂದ ಹಂಪಿಯ ವಿರೂಪಾಕ್ಷ ದೇವಾಲಯ, ಮಾತಂಗ ಪರ್ವತ, ಅಚುತ್ಯರಾಯ ದೇವಾಲಯ ಹಾಗೂ ವಿಜಯ ವಿಠ್ಠಲ ದೇವಾಲಯ ಮತ್ತು ಜಗತ್ತಪ್ರಸಿದ್ಧ ಕಲ್ಲಿನ ರಥಗಳು ಬಹಳ ಸುಂದರವಾಗಿ ಕಾಣಿದವು. ಅದೆ ರೀತಿಯಾಗಿ ಅಲ್ಲಿನ ಭತ್ತ ಮತ್ತು ಬಾಳೆಹಣ್ಣಿನ ಗದ್ದೆಗಳು ಮತ್ತು ತೆಂಗಿನ ಮರಗಳು ತುಂಬಾ ಚೆನ್ನಾಗಿ ಕಂಡವು. ಈ ಬೆಟ್ಟದಲ್ಲಿ ನಾವು ಮತ್ತು ಎಲ್ಲ ರೋವರ್ಸ್ ಮತ್ತು ರೇಂಜರ್ಸ್ ಗಳು ಫೋಟೊ ತೆಗೆಸಿಕೊಂಡೆವು ಮತ್ತು ಅಲ್ಲಿ ನಮ್ಮಗೆ ಅಥಣಿಯ ಒಂದು ಕಾಲೇಜಿನ ಸ್ಕೌಟ ಮತ್ತು ಗೈಡ್ಸ್‌ನ ಸಂಚಾಲಕರು ನಮ್ಮಗೆ ಸ್ಕೌಟನ ಬಗ್ಗೆ ಮಾಹಿತಿಯನ್ನು ನೀಡಿದರು. ೧೧:೪೦ ರ ಸುಮಾರಿಗೆ ಬೆಟ್ಟದಿಂದ ಇಳಿದು ಬಂದೆವು.

ಅಂಜನಾದ್ರಿಯಿಂದ ನಾವು ಅಲ್ಲಿಂದ ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿಯಾದ ಆನೆಗುಂದಿಗೆ ಹೋದೆವು ಅಲ್ಲಿ ನಾವು ಹೋದಾಗ ೧೨:೧೦ ಆಗಿತ್ತು. ಅಲ್ಲಿ ನಾವು ಆನೆಗುಂದಿಯಲ್ಲಿ ಅರಮನೆ, ಶ್ರೀಕೃಷ್ಣದೇವರಾಯನ ಸಮಾಧಿ, ಅಲ್ಲಿನ ಪ್ರಮುಖ ಬೀದಿಗಳನ್ನು ಮತ್ತು ಅಲ್ಲಿನ ಪ್ರಮುಖ ಫಲಕಗಳನ್ನು ನೋಡಿದೆವು. ಅಲ್ಲಿಂದ ನಾವು ೧೨:೫೦ರ ಸುಮಾರಿಗೆ ಹಂಪಿಯ ಕಡೆಗೆ ಪ್ರಯಾಣ ಬೆಳೆಸಿದೆವು. ಮಾರ್ಗದ ಮಧ್ಯ ಬುಕ್ಕಸಾಗರದಲ್ಲಿನ ಏಳುಹೆಡೆ ನಾಗಪ್ಪನ ದೇವಾಲಯದ ಆವರಣದಲ್ಲಿ ಇದ್ದ ಬನ್ನಿಮರದ ಕಟ್ಟೆಯಲ್ಲಿ ೧:೨೦ ರ ಸುಮಾರಿಗೆ ಊಟಕ್ಕೆ ಕುಳಿತೆವು ಅಲ್ಲಿ ಎಲ್ಲ ರೋವರ್ಸ್ ಮತ್ತು ರೇಂಜರ್ಸ್ ರು ತಾವು ತಯಾರಿಸಿದ ಆಹಾರವನ್ನು ಸೇವನೆ ಮಾಡಿದರು. ೨:೫ಕ್ಕೆ ನಮ್ಮ ಊಟ ಮುಗಿಸಿದೆವು ಮತ್ತು ನಾಗಪ್ಪನ ದರ್ಶನವನ್ನು ಪಡೆದು ಅಲ್ಲಿಂದ ಮತ್ತೆ ಹಂಪಿಯ ಕಡೆ ಪ್ರಯಾಣ ನಡೆಸಿದೆವು. ಮೊದಲು ನಾವು ವಿಜಯ ವಿಠ್ಠಲ ದೇವಾಲಯಕ್ಕೆ ಹೋದೆವು,ಅಲ್ಲಿ ನಮ್ಮಗೆ ಒಬ್ಬ ವೀಕಲಚೇತನ ಗೈಡ ನಮ್ಮಗೆ ವಿಠ್ಠಲ ದೇವಾಲಯದ ಬಗ್ಗೆ ಮಾಹಿತಿಯನ್ನು ನೀಡಿದರು. ವಿಠ್ಠಲ ದೇವಾಲಯವನ್ನು

...ಸುಮಾರಿಗೆ ವಿರೂಪಾಕ್ಷ ದೇವಾಲಯದ ಕಡೆ ಪ್ರಯಾಣ ಬೆಳೆಸಿದೆವು
...ಸುಮಾರಿಗೆ ವಿರೂಪಾಕ್ಷ ದೇವಾಲಯವನ್ನು ಪ್ರವೇಶ ಮಾಡಿದೆವು ಅಲ್ಲಿ
...ದೇವಾಲಯದ ಸುತ್ತಮುತ್ತಲಿನ ಅದ್ಭುತ ವಾಸ್ತುಶಿಲ್ಪ ಮತ್ತು ಚಿತ್ರಕಲೆಯನ್ನು
ವೀಕ್ಷಿಸಿದೆವು ಅಲ್ಲಿ ವಿರೂಪಾಕ್ಷ ದೇವಾಲಯದ ಮುಖಮಂಟಪದ ಮೇಲ್ಛಾವಣಿಯಲ್ಲಿ
...ಕಲ್ಯಾಣದ ಮತ್ತು ಗಿರಿಜಾ ಮತ್ತು ಬ್ರಾಹ್ಮಣರು ಗುರು ವಿದ್ಯಾರಣ್ಯರನ್ನು
ಪಲ್ಲಕ್ಕಿಯಲ್ಲಿ ಮೆರವಣಿಗೆಯಿಂದ ಕರೆತರುತ್ತಿರುವ ದೃಶ್ಯಗಳ ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ
ದೇವಾಲಯದ ಹಿಂದಿನ ಭಾಗದಲ್ಲಿ ಈ ದೇವಾಲಯದ ರಾಜಗೋಪುರದ ತಲೆ
ಕೆಳಗಾಗಿ ಕಾಣುವ ದೃಶ್ಯವನ್ನು ನೋಡಿದೆವು ಮತ್ತು ಅಲ್ಲಿ ನಾವು ರಾಜಗೋಪುರದ
ಈ ಪ್ರತಿಬಿಂಬದ ವೈಜ್ಞಾನಿಕತೆಯ ಬಗ್ಗೆ ಮಾಹಿತಿ ನೀಡುವ ಫಲಕವನ್ನು ನೋಡಿದೆವು.
ನಂತರ ನಾವು ೩:೩೦ರ ಸುಮಾರಿಗೆ ಹಂಪಿಯಿಂದ ನಾಗಲಾಪುರದ ಕಡೆಗೆ ಅಂದರೆ
ಹೊಸಪೇಟೆಯ ತುಂಗಭದ್ರಾ ಅಣೆಕಟ್ಟಿನ ಕಡೆ ಪ್ರಯಾಣ ಬೆಳೆಸಿದೆವು. ೬:೫೦ ರ ಸುಮಾರಿಗೆ
ತುಂಗಭದ್ರಾ ಅಣೆಕಟ್ಟಿನ ವಾಹನ ನಿಲುಗಡೆ ಸ್ಥಳಕ್ಕೆ ಬಂದೆವು ಅಲ್ಲಿ ವಿವಿಧ ರಾಜ್ಯಗಳಿಂದ
ಸಾಕಷ್ಟು ಪ್ರವಾಸಿ ವಾಹನಗಳು ಬಂದಿದ್ದವು.೭ ಗಂಟೆಗೆ ಟಿಕೆಟ ಪಡೆದುಕೊಂಡು
ಉದ್ಯಾನವನದ ಕಡೆ ನಡೆದೆವು ಸರಿಸುಮಾರು ೧ ಗಂಟೆಗಳ ಕಾಲ ಉದ್ಯಾನವನದಲ್ಲಿ
ಅಲ್ಲಿನ ಸಂಗೀತ ಕಾರಂಜಿಯನ್ನು ವೀಕ್ಷಿಸಿ ಉದ್ಯಾನವನದಲ್ಲಿ ನಮ್ಮ ನಾಗಣ್ಣವರ ಸರ್
...ಮೇಡಮ್ಸ್ ಮತ್ತು ಲೆಕ್ಚರರ್ಸ್‌ಗಳಿಗೆ ಒಂದು ದಿನದ ಚಾರಣದ ಅಭಿಪ್ರಾಯವನ್ನು
ತಿಳಿಸಲು ನಾನು ಕೂಡ ಎಲ್ಲರಂತೆ ನನ್ನ ಅಭಿಪ್ರಾಯವನ್ನು ಹೇಳಿದೆನು.ಉದ್ಯಾನವನದಲ್ಲಿ
ಐಸ್‌ಕ್ರೀಮ್ ಸೇವನೆ ಮಾಡಿದೆವು. ಸರಿಸುಮಾರು ೯:೧೦ರ ಸುಮಾರಿಗೆ ಬಸ್ ನಿಂತಿದ
ಜಾಗಕ್ಕೆ ಬಂದು ಎಲ್ಲರೂ ರಾತ್ರಿಯ ಊಟವನ್ನು ಮಾಡಿದೆವು ಹೊಸಪೇಟೆಯಿಂದ ನಾವು
೧೦ರ ಸುಮಾರಿಗೆ ಬಿಟ್ಟು ರಾತ್ರಿ೧೧:೪೫ರ ಸುಮಾರಿಗೆ ಮಹಾವಿದ್ಯಾಲಯದ ಆವರಣಕ್ಕೆ
ಬಂದೆವು.ಒಟ್ಟಿನಲ್ಲಿ ಸ್ಕೌಟಿನ ಬೇಸಿಗೆಯ ಒಂದು ದಿನದ ಚಾರಣ ಬಹಳ ಸುಂದರವಾಗಿತ್ತು
ಎಂಬುದು ನನ್ನ ಅಭಿಪ್ರಾಯ.


## ಅಂಜನಾದ್ರಿಯಲ್ಲಿ ತೆಗೆಸಿಕೊಂಡ ಫೋಟೋಗಳು





ನಾವು ಚಾರಣದಲ್ಲಿ ತೆಗೆದುಕೊಂಡ ಬಂಡೆ ಮತ್ತು ಫಲಕಗಳ ಚಿತ್ರಗಳು









ತಂಡದ ಹೆಸರು:-

ಸುಭಾಷ್ ಚಂದ್ರ ಬೋಸ್ :-

members:-

1) Naveen. B. Ingalagi.
2) Shivaraj. B. patil.
3) Hanamesha
4) praveen. A

ನಮಗೆ 18/06/22 ರಂದು ಸರ್ ಒಂದು ಸಂದೇಶವನ್ನು ಹೇಳಿದರು. 19/06/22 ರಂದು ನಾವು ಎಲ್ಲರೂ ಬೇಸಿಗೆ ಶಿಬಿರ ಅಂಗವಾಗಿ ಅಂಜನಾದ್ರಿ ಬೆಟ್ಟಕ್ಕೆ ಹೋಗಬೇಕು ಅಂತ ಹೇಳಿದರು. ಎಲ್ಲರೂ OK ಸರ್ ಅಂತ ಹೇಳಿದರು. ನಮಗೆ ಬೆಳಗ್ಗೆ 5:00ದ 5:30 ರ ಒಳಗಾಗಿ ಎಲ್ಲರೂ ಆಸ್ಪತ್ರೆ ಹಾಜರಾಗಬೇಕು ಅಂತ ಹೇಳಿದರು. ಆದರೆ ಸ್ವಲ್ಪ ವಿದ್ಯಾರ್ಥಿಗಳು ತಡವಾಗಿ ಬಂದಿದ್ದರಿಂದ ನಾವು ನಮ್ಮ ಬಸ್ಸನ್ನು 6:00 ಕ್ಕೆ ಬಿಡುತ್ತೇವೆ. ನಮ್ಮ ಬಸ್ಸಿನಲ್ಲಿ ಇಬ್ಬರು ಸರ್ ಬಂದಿದ್ದರು. ಹೂವಿನಗುಂಡಿ ನಲ್ಲಿ ಹೈವೆಯಲ್ಲಿ ನಮ್ಮ ಗಣಿತ ಶಾಸ್ತ್ರ ಆದ ಎಸ್.ಬಿ. ಉಮಾಲಕ್ಷ್ಮಿ ಮೇಡಂ ಅವರು ಬಂದರು. ಅದ ನಂತರ ಹೊರಡುತ್ತೇವೆ. ಇಲಕಲ್ಲ ನಲ್ಲಿ ಕಂಠಿ ಸರ್ಕಲ್ ನಲ್ಲಿ ನಮ್ಮ zoology ಮೇಡಂ ಆದ ಕವಿತಾ ಮೇಡಂ ಅವರು ಬಂದರು. ಮತ್ತೆ ನಮ್ಮ ಬಸ್ಸು ಮುಂದೆ ಸಾಗಿತು. ಬೆಳಗ್ಗೆ 6:00 ಗಂಟೆಗೆ ಬಿಟ್ಟ ಕಾರಣ ನಮ್ಮ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಬೆಳಗ್ಗಿನ ನಾಷ್ಟ ಮಾಡಿರಲಿಲ್ಲ ಆದ ಕಾರಣ ಸರ್ ಇಲ್ಲಿ ಸಮೀಪದ ಇರುವ ಬೂದುಗುಂಪ ಕ್ರಾಸ್‌ನಲ್ಲಿ ಎಲ್ಲರೂ ನಾಷ್ಟ ಮಾಡಲು ಇಳಿಯುತ್ತೇವೆ. ಆಗ ಸಮಯ ಸುಮಾರು 9:30 ಆಗಿರಬಹುದು ಸರಿಯಾಗಿ ಗೊತ್ತಿಲ್ಲ. ನಾವು ನಾಷ್ಟ ಮಾಡುತ್ತೇವೆ ಆ ನಾಷ್ಟದ ಹಣವನ್ನು ನಮ್ಮ ಸರ್ ಆದ ನಾಗಣ್ಣವರ ಅವರು ಕೊಟ್ಟರು ಅದ ನಂತರ ನಮ್ಮ ಪ್ರಯಾಣ ಮುಂದೆ ಸಾಗಿತು. ನಾವು ನೇರವಾಗಿ ನಾವು ಅಂಜನಾದ್ರಿಯ ಬೆಟ್ಟಕ್ಕೆ ತಲುಪುತ್ತೇವೆ. ಅಲ್ಲಿ ಬೆಟ್ಟದ ಸಮೀಪದ ಇರುವ ಗಾಡಿ ಪಾರ್ಕಿನಲ್ಲಿ ನಾವು ನಮ್ಮ ಬಸ್ಸನ್ನು ಪಾರ್ಕ್ ಮಾಡಿ. ನಾವು ಆಗ ಟ್ರೇನ್ ಬರಲಾಗುವುದು ಸ್ಟೇಟ್ ಟ್ರೇನ್ ಹಾಳಿ ಕೊಂಡು ನಾವು ನಮ್ಮ ಪ್ರಯಾಣ ಮುಂದೆ ಬೆಳೆಸುತ್ತೇವೆ. ನಮ್ಮ ಪ್ರಯಾಣ ಮುಂದೆ ಬೆಳೆಸಲು ಮುಂಚೆ ಸರ್ ನಮಗೆ ಮುನ್ನೆಚ್ಚರಿಕೆಗಳನ್ನು ಕೊಟ್ಟರು. ತಲಾ 4 ಜನ ವಿದ್ಯಾರ್ಥಿಗಳನ್ನು ಸೇರಿಸಿ ಒಂದು ಒಂದು ಗುಂಪು ಮಾಡಿ. ಆ ಗುಂಪಿಗೆ ಒಂದು ಹೆಸರು ನಾಮಕರಣ ಮಾಡಿ. ನಮ್ಮ ಗುಂಪಿಗೆ ಸುಭಾಷ್ ಚಂದ್ರ ಬೋಸ್ ಅಂತ ನಾಮಕರಣ ಮಾಡಿ. ನಮಗೆ ಒಂದು ಮುನ್ನೆಚ್ಚರಿಕೆ ಕೊಟ್ಟರು. ಅದು ಏನು ಅಂದರೆ ನಾವು ಈಗ ಬೆಟ್ಟವನ್ನು ಹತ್ತುತ್ತೇವೆ ಆಗ ನಮ್ಮ ಕಣ್ಣು ಮುಂದೆ ಯಾವ ಪ್ರಾಣಿ, ಪಕ್ಷಿ, ಗಿಡ, ಮತ್ತು ಆ ದೇವಸ್ಥಾನದ ಬಗ್ಗೆ ಕಂಡಿದೆ ಅಂತ ನಾವು ಬರೆದು ಕೊಂಡು ಮತ್ತು ಬರೆಯಬೇಕು


ನಾಯಿ ಬೆಕ್ಕುಗಳನ್ನು ಅಟ್ಟುತ್ತದೆ ಆಗಾಗ ನಮ್ಮ ಕಣ್ಣ ಮುಂದೆ
ಕಂಡ ಪ್ರಾಣಿ ಪಕ್ಷಿ ಗಳು ಕೆಳಗಿನಂತಿವೆ.




ಆಡು



ನಾಯಿ





ಕೋತಿ



[illegible]



[illegible]

[illegible] [illegible]



ಅಂಜನಾದ್ರಿಯು ಬೆಟ್ಟವು ಒಂದು ತುಂಬ ಸ್ವೀಯಕಾರಿಗೆ ಸುಂದರವಾದ
ತಾಣವಾಗಿದೆ. ಅಂಜನಾದ್ರಿಯು ಬೆಟ್ಟವನ್ನು ಹತ್ತ ಬೇಕಾದರೆ
ಸು ಸುಮಾರು 575 ಮೆಟ್ಟಿಲುಗಳಿವೆ. ಆ 575 ಮೆಟ್ಟಿಲುಗಳು
ಹತ್ತಿದ ನಂತರ ನಮಗೆ ನೋಡಲು ಸುಂದರವಾದ ಅಂಜನಾದ್ರಿಯು
ದೇವಸ್ಥಾನ ನಾವು ಅಲ್ಲಿ ಕಾಣ ಬಹುದು. ಆ ದೇವಾಲಯವು ಕೆಂಪು
ಬಣ್ಣದಿಂದ ಕೂಡಿದೆ. ಏಕೆಂದರೆ ಹನುಮಂತನ ಅಂಶ ಹಳದಿ
ಕೇಸರಿ ಅದ ಕಾರಣ ಆ ದೇವಾಲಯಕ್ಕೆ ಕೇಸರಿ ಬಣ್ಣದಿಂದ
ಅಲಂಕಾರ ಮಾಡಿರುತ್ತಾರೆ. ಆ ದೇವಾಲಯದ ಗೋಪುರ ತ್ರಿಭುಜ
ಆಕಾರದಿಂದ ಕೂಡಿದೆ. ಒಟ್ಟಾರೆ ನಾವು ಆ ದೇವಾಲಯದಲ್ಲಿ
ಹೊರಗಡೆ 6 ಕಂಬಗಳನ್ನು ಕಾಣ ಬಹುದು. ಅಲ್ಲಿ 4 ದೊಡ್ಡ
ಕಂಬಗಳು ಮತ್ತು 2 ಸಣ್ಣ ಕಂಬಗಳು ಇವೆ. ಸಣ್ಣದಾದ
ಕಂಬಗಳಲ್ಲಿ 10 ಕಬ್ಬಿಣದ ರಾಡ್ ಗಳಿಂದ ಕೂಡಿದೆ. ದೊಡ್ಡದಾದ 4
ಕಂಬಗಳಲ್ಲಿ 32 ಕಬ್ಬಿಣದ ರಾಡ್‌ಗಳಿವೆ. ಒಳಗಡೆ 3 ಕಂಬಗಳು ಇವೆ.
ಅದರಲ್ಲಿ 2 ಸಣ್ಣದಾದ ಕಂಬ ಒಂದು ದೊಡ್ಡದಾದ ಕಂಬ.
ಸಣ್ಣದಾದ ಕಂಬಗಳಲ್ಲಿ 15 ಕಬ್ಬಿಣದ ರಾಡ್ ಇವೆ. ದೊಡ್ಡದಾದ
ಕಂಬಗಳಲ್ಲಿ 28 ರಾಡ್‌ಗಳಿವೆ. ಅದ ನಂತರ ನಾವು ದೇವಾಲಯದ
ಒಳಗಡೆ ಹೋಗುವಾಗ ದ್ವಾರ ಬಾಗಿಲ ಬಳಿ ನಾವು ಹಲವು
ಬಳಸಿದ ಕಲ್ಲು ಇದೆ. ಅದು 25 kg ಇದೆ. ನಾವು ದೇವಾಲಯದ
ಒಳಗಡೆ ಹೋದಾಗ ನಮಗೆ photo ತೆಗೆದು ಹಾಕಲು ಅನುಮತಿ
ಇರಲಿಲ್ಲ. ಆದರೆ ನಾವು ಹೊರಗಡೆ ಕಟ್ಟೆ ಮೇಲೆ photos
ತೆಗೆದು ಹಾಕುತ್ತೇವೆ. ಅದ ನಂತರ ನಾವು ವಾಪಸ್ ಮಾಡಿ ಹೊರಗೆ
ಒಂದು ಬೆಟ್ಟವನ್ನು ಇಳಿದು ನಮ್ಮ ಪಯಣ ಆರಂಭಿಸಿದೆ.

## ಬಾಲ ಆಂಜನೇಯ :-

ಆಂಜನೇಯನು ಕಿಷ್ಕಿಂದೆಯಲ್ಲಿ ಜನಿಸಿದನೆಂದು ಪ್ರತೀತಿ. ಅವನು
ಬಾಲ್ಯ ಬೆಟ್ಟಗಳನ್ನು ಹೊತ್ತೊಯ್ಯುವ ಶಕ್ತಿ ಹೊಂದಿದ್ದ. ಮನಸ್ಸಿನ
ಇಚ್ಛೆಯಂತೆ ದೇಹದ ಗಾತ್ರವನ್ನು ಹಿಗ್ಗಿಸಲು ಅಥವಾ ಕುಗ್ಗಿಸಲು
ಸಾಮರ್ಥ್ಯ ಹೊಂದಿದ್ದ. ಒಂದು ದಿನ ಮುಂಜಾನೆ ಎದ್ದ ಬಾಲ ಆಂಜನೇಯನು
ಹಸಿವಾಗಿತ್ತು. ಆದರೆ ಅಲ್ಲಿ ಏನೂ ಆಹಾರವಿರಲಿಲ್ಲ. ಆಗಸದಲ್ಲಿ
ಹೊಳೆಯುವ ಕೆಂಪನೆಯ ಚೆಂಡನ್ನು ನೋಡಿ, ಅದೊಂದು ರುಚಿಯಾದ
ಹಣ್ಣೆಂದು ತಿಳಿದು, ತನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿ ಸೂರ್ಯನನ್ನು ಹಿಡಿಯಲು
ಆಕಾಶಕ್ಕೆ ನೆಗೆದ. ಗಾಬರಿಯಾದ ಸೂರ್ಯ ಸಹಾಯಕ್ಕಾಗಿ ಇಂದ್ರನನ್ನು ಕರೆದ.

ಇಂದ್ರನು ತನ್ನ ವಜ್ರಾಯುಧವನ್ನು ಬಳಸಿ ಆಂಜನೇಯನತ್ತ ಎಸೆದಾಗ
ಅದು ನೇರವಾಗಿ ಆಂಜನೇಯನ ಹನುವಿಗೆ ಬಿದ್ದಿತಂತೆ.
ಆತ ಎತ್ತರದಿಂದ ಕೆಳಗಡೆ ಬೆಟ್ಟದ ಮೇಲೆ ಬಿದ್ದನು ದೇವರ
ಮಗನು. ಇದರಿಂದ ಆತನ ತಂದೆಯಾದ ವಾಯುದೇವನು
ಕೋಪಗೊಂಡು ಬ್ರಹ್ಮಾಂಡ ಮೇಲಿನ ಎಲ್ಲಾ ಗಾಳಿಯನ್ನು ತನ್ನ
ದೇಹದೊಳಗೆ, ಸೆಳೆದು ಕೊಂಡು ಗುಹೆಯೊಂದರಲ್ಲಿ ಅಡಗಿ ಕುಳಿತ.
ನಂತರ ಬ್ರಹ್ಮನು ಆಂಜನೇಯನಿಗೆ ಚಿರಂಜೀವಿಯಾಗಿರುವಂತೆ
~~ಆಶೀ~~ ಅನುಗ್ರಹಿಸಿದ ಶಕ್ತಿಯನ್ನು ಕರುಣಿಸಿ ವಾಯುವನ್ನು
ಸಮಾಧಾನ ಪಡಿಸಿ ಎಲ್ಲಾ ಜೀವಿಗಳನ್ನು ಬದುಕಿಸಿ ಸಮಾಧಾನಗೊಳಿಸಿದ
ಅಂದಿನಿಂದ ಬೆಟ್ಟವನ್ನು ಆಂಜನೇಯ ಜನ್ಮಸ್ಥಳ ಎಂದು
ನಂಬಲಾಗಿದೆ.





ಇದರ ಸಂಪೂರ್ಣ ಮಾಹಿತಿ ಪಡೆದು ಕೊಂಡು ನಾವು ನಮ್ಮ ಪ್ರಯಾಣ
ಮುಂದುವರೆಸಿದೆವು. ನಮ್ಮ ಪ್ರಯಾಣ ಆನೆಗುಂದಿ ಕಡೆ.
ನಾವು ಆ ಬೆಟ್ಟವನ್ನು ಬಿಟ್ಟು ನೇರವಾಗಿ ಆನೆಗುಂದಿ ಹೋಗುತ್ತೇವೆ
ಸ್ವಲ್ಪ ಗಂಟೆಗಳ ನಂತರ ನಾವು ಆ ಊರಿಗೆ ತಲುಪುತ್ತೇವೆ.
ಅಲ್ಲಿ ಒಬ್ಬ ರಾಜನ ಅರಮನೆ ನೋಡುತ್ತೇವೆ. ಆ ಅರಮನೆ
ಒಳಗೆ ಹೋಗಲು ಪ್ರವೇಶ ಇಲ್ಲ ಎಂದು ಹೇಳಿದರು. ನಾವು ಹೊರಗಡೆ
ಇಂದ ಅದನ್ನು ನೋಡುತ್ತೇವೆ. ಅದರ ನಂತರ ನಾವು ಮಧ್ಯಾಹ್ನ
ಕಾರಣದಿಂದ ನಾವು ಆನೆಗುಂದಿಯಲ್ಲಿ ಇರುವ ಸ್ಥಳ ನೋಡಲು
ಆಗುವುದಿಲ್ಲ. ಆ ಮೇಲೆ ನಮ್ಮ ಪ್ರಯಾಣ ವಿಜಯ ವಿಠ್ಠಲ
ದೇವಸ್ಥಾನದ ಕಡೆ. ಆ ವಿಜಯ ವಿಠ್ಠಲ ದೇವಸ್ಥಾನಕ್ಕೆ ಹೋಗುವಾಗ
ನಡುವೆ ಬುಕ್ಕಸಾಗರ ಎಂಬ ಒಂದು ಹಳ್ಳಿಯಲ್ಲಿ ಒಂದು ನಾವು
ಮಧ್ಯಾಹ್ನದ ಊಟ ಹಳ್ಳಿ ಮಾಡಿ ಜೊತೆ ಒಂದು ಸಣ್ಣ ತೋಟದಲ್ಲಿ
ನಮ್ಮ ಶಿಕ್ಷಕರು / ಶಿಕ್ಷಕಿಯರು ಎಲ್ಲರು ಒಂದು ಒಂದು ಊಟ
ಮಾಡಿಕೊಂಡು ತಂದಿದ್ದರು. ಅವರೆಲ್ಲ ಎಲ್ಲವನ್ನು ಬಡಿಸಿ ನಾವು
ಒಂದು ಊಟ ತಯಾರು ಮಾಡುತ್ತೇವೆ.

ಎಲ್ಲರೂ ಬಂದು ಅವರ ಸರದಿಗಾಗಿ ಕಾಯುತ್ತಾ ನಿಂತು
ಕೊಂಡು ಊಟ ಮಾಡಿ ಸಂತೋಷದಿಂದ ಊಟ ಮುಗಿಸುತ್ತೇವೆ.
ಊಟ ಮುಗಿದ ನಂತರ ನಾವು ನಮ್ಮ ಪಯಣ ಮುಂದುವರಿಸುತ್ತೇವೆ
ನಾವು ವಿಜಯ ವಿಠ್ಠಲ ದೇವಸ್ಥಾನವನ್ನು ತಲುಪಿದ ಕೂಡಲೆ
ನಾವು ದೇವಸ್ಥಾನಕ್ಕೆ ಹೋಗಲು 2KM ಇದೆ. ಆ 2KM
ತಲುಪಿ ಬೇಕಾದರೆ ಬ್ಯಾಟರಿಯ ಗಾಡಿಗಳು [ವಾಹನ] ಇವೆ.
ಆದರೆ ನಾವು ಎಲ್ಲರೂ ನಡೆದು ಕೊಂಡು ಹೋಗುತ್ತೇವೆ.
ಏಕೆಂದರೆ ನಾವು ಬ್ಯಾಟರಿಯ ಗಾಡಿಯಲ್ಲಿ ಹೋಗಬೇಕಾದರೆ
ನಡುವೆ ಬರುವ ದೇವಾಲಯ ಅಥವಾ ಯಾವುದೇ ಸ್ಥಳ
ನೋಡಲು ಸಾಧ್ಯ ಆಗುವುದಿಲ್ಲ. ಆದ ಕಾರಣ ಬಹಳ ಜನರಿಂದ
ದಿನ್ ಬ್ಯಾಟರಿಯ ಗಾಡಿಗಳು ಬೇಡ ಎಂದು ಹೇಳಿ ನಾವು
ನಡೆದು ಕೊಂಡು ಹೋಗಲು ಆರಂಭ ಮಾಡುತ್ತೇವೆ. ನಾವು
ನೋಡುತ್ತಾ ನೋಡುತ್ತಾ 2KM ಮುಗಿದು ಹೋಯಿತು.
ನಾವು ವಿಜಯ ವಿಠ್ಠಲ ದೇವಸ್ಥಾನದ ಒಳಗಡೆ ಹೋಗ ಬೇಕಾದರೆ
ನಾವು ಟಿಕೆಟ್ ಗಳನ್ನು ತೆಗೆದು ಕೊಂಡು ಹೋಗ ಬೇಕು. ಒಂದು
ವೇಳೆ ಟಿಕೆಟ್ ಇಲ್ಲದೆ ಹೋದರೆ ನಮ್ಮನ್ನು ಒಳಗಡೆ
ಬಿಡುವುದಿಲ್ಲ. ಆದ ಕಾರಣ ವಿದ್ಯಾರ್ಥಿ / ವಿದ್ಯಾರ್ಥಿನಿಯರು ಟಿಕೆಟ್ ಗಳನ್ನು
ನಮ್ಮ ಶಿಕ್ಷಕರು ನಾಯಕರಾದ ಶಿಕ್ಷಕರು ಅವರು ಟಿಕೆಟ್
ತೆಗೆದು ಕೊಂಡು ನಮಗೆ ಕೊಡುತ್ತಾರೆ. ಟಿಕೆಟ್ ತೆಗೆದು ಕೊಂಡ
ನಂತರ ೨-೩ ನಿಮಿಷದಲ್ಲಿ ನಮಗೆ ಒಬ್ಬರು ಗೈಡ್ ಬೇಕು ಎಂದು
ಹೇಳಿದರು. ನಾವು ದೇವಾಲಯಗಳ ಒಳಗಡೆ ಹೋಗಿ ನಾವು
ಮುಖ್ಯವಾಗಿ ನೋಡಿ ಬಂದರೆ ಅವನು ಅವರಿಗೆ ಎಲ್ಲ ಅದರ ಬಗ್ಗೆ
ನಾವು ಕಂಪ್ಲೀಟ್ ವಿವರವಾಗಿ ಹೇಳಿ ಅದರ ಇತಿಹಾಸವನ್ನು ನಾವು
ತಿಳಿದು ಕೊಳ್ಳಲು ಎಂದು ನೀವು ಅವರು ಈ ಬಗ್ಗೆ ಹೇಳಿದರು
- ನಮ್ಮ ಶಿಕ್ಷಕರು ಹೇಳುತ್ತಾರೆ. ಅದರ ನಂತರ ನಾವು
ಒಳಗಡೆ ಹೋಗುತ್ತೇವೆ.




ವಿಠ್ಠಲ ದೇವಾಲಯವು ಸಂಕೀರ್ಣದ ನಾಲ್ಕು ದಿಕ್ಕಿನಲ್ಲೂ ರಥ ಬೀದಿಗಳು
ಇಲ್ಲಿನ ಪ್ರಮುಖ ದೇವಾಲಯಗಳ ಎದುರು ಸಂಪ್ರದಾಯದ ರಥ ಬೀದಿಗಳು
ಹಾಗು ಆ ಬೀದಿಗಳು ಅಂಚಿನ ಇಕ್ಕೆಲಗಳಲ್ಲಿ ಹಲವು
ಮಂಟಪ ಸಾಲುಗಳು ಇವೆ. ಬೀದಿಯುದ್ದಕ್ಕೂ 12 ನೇ ಶತಮಾನದ
ತೆರೆದ ಮಂಟಪಗಳನ್ನು ಮಾರಾಟಕ್ಕೆ ವ್ಯಾಪಾರಿಗಳು ಬಳಸುತ್ತಿದ್ದರು
ಕೆಲವು ಬಗೆಯ ಹಾರ ಕಲ್ಲುಗಳನ್ನು ತಯಾರಿಸಿ ಬಳಸುತ್ತಿದ್ದರು.
ಹಿಂದಿನ ದಿನಗಳಲ್ಲಿ ಉತ್ಸವ ರಥ ಬೀದಿಯಲ್ಲಿ ಮೆರವಣಿಗೆ
ನಡೆಸಲಾಗಿದ್ದು. ಇದರ ಮೇಲೆ ಒಂದು ಕಲ್ಲಿನ ಸೇತುವೆ ಇದೆ.
ಸಮೀಪದ ದಿನಗಳಲ್ಲಿ ಹಲವು ಜನ ಮೂಲಕ ಹರಿವ ನೀರಿನ ಹೊಳೆಗಳ
ನೀರಿನ ಜೊತೆಗೆ ಇರುವಂತೆ ಮಾಡಲು ಬೇಕಾದ
ಸಂಗ್ರಹ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
ಇಲ್ಲಿನ ಕೆಲವು ಮಂಟಪಗಳು ನಾಶವಾಗಿದೆ. ವಿಠ್ಠಲ ದೇವಸ್ಥಾನದ
ಸಮೀಪಕ್ಕೆ ಹೋಗಲು ಮೆಟ್ಟಿಲುಗಳಲ್ಲಿ ಎರಡು ಕಡೆ
ಮಂಟಪವಿದೆ. ಈ ದೇವಸ್ಥಾನದ ಪೂರ್ವ ರಥ ಬೀದಿ
ಎದುರಿಗೆ ಹಲವು ಮಂಟಪ ಬೀದಿಗಳು ದೇವಸ್ಥಾನಗಳು
ಹಾಗು ಜನರು ಇರುವುದನ್ನು ಕಾಣಬಹುದು.






ಇಷ್ಟು ಪ್ರಸಿದ್ಧ ದೇವಾಲಯದಲ್ಲಿ ನಮಗೆ ಪ್ರಮುಖವಾಗಿ ಕಾಣುವ ಒಂದೇ
ಒಂದು ರಥ ಕಲ್ಲಿನ ರಥ ಇದು ಪ್ರವಾಸಿಗರಿಗೆ ಬಹಳ ಇಷ್ಟ ಆಕರ್ಷಣೆಯ
ಭಾಗವಾಗಿರುವ ರಥ. ಇದು ನಮ್ಮ ಭಾರತದ 50 Ruppes ನೋಟು
-ಗಳಲ್ಲಿ ನಾವು ನೋಡಬಹುದು. ಇಂತಹ ರಥ ನಮ್ಮ ದೇಶದಲ್ಲಿ
ಮೂರು ಇವೆ. ಮೊದಲನೆಯದು ಒರಿಸ್ಸಾದ ಕೋಣಾರ್ಕ್‌ನಲ್ಲಿ
ಎರಡನೆಯದು ತಮಿಳುನಾಡು ಮಹಾಬಲಿಪುರಂ. ಮೂರನೆಯದು
ಹಂಪಿಯಲ್ಲಿ ಇದೆ. ರಥ ನೋಡಿದವರು ಎಲ್ಲರೂ ಒಂದೇ ಕಲ್ಲಿನಲ್ಲಿ
ಮಾಡಿದ್ದಾರೆ ಅಂತ ಹೇಳುತ್ತಾರೆ. ಆದರೆ ಒಂದು ಕಲ್ಲು ಇಲ್ಲ
7 ಬಂಡೆ ಇದೆ, 24 ಪೀಸ್ ಇವೆ ಈ ಎಲ್ಲಾ ಪೀಸ್‌ಗಳು ಇಂಟರ್
ಲಾಕ್ ಆಗಿದೆ. ನೋಡಲು ಆದರೂ ಸಹ ರಥದ ಒಂದು ಕಲ್ಲು ಕಾಣಿಸದ
ಹಾಗಿಲ್ಲ. ಈ ದೇವಾಲಯಕ್ಕೆ ಸಂಬಂಧ ಪಟ್ಟ ಶಾಸನಗಳು 3 ಇವೆ.
ಅವುಗಳಲ್ಲಿ ಶಾಸನಗಳಲ್ಲಿ ಕಲ್ಲಿನ ರಥ ಶಾಸನ ಅಂತ ಉಲ್ಲೇಖ
ಮಾಡಿಲ್ಲ. ನೋಡುವ ಕಣ್ಣುಗಳಿಗೆ ಮಾತ್ರ ಇದು ಕಲ್ಲಿನ ರಥ, ರಾಜರು
ಮಾಡಿರುವ ಉದ್ದೇಶ ಬೇರೆ ಇರುವ ದೇವಾಲಯದ ಒಳಗಡೆ ಹೊರಗೆ
ಇರುವ ವಾಹನ ನೋಡುತ್ತೇವೆ ನಂದಿ ಹಾಗೆ ವಿಷ್ಣು ದೇವಾಲಯ
ವಿಷ್ಣುವಿನ ವಾಹನ ಗರುಡ. ರಥದ ಒಳಗಡೆ ಇದ್ದಿದ್ದು ಗರುಡ
ಮೂರ್ತಿ ಇದೆ.




ವಿಜಯ ವಿಠ್ಠಲ ದೇವಸ್ಥಾನದಲ್ಲಿ ಇರುವ ಗೋಪುರಗಳು
ಸುಮಾರು ವರ್ಷಗಳ ಕಾಲ ಹಳೆಯ ಆಕಾರದಿಂದ ಗೋಪುರಗಳು
ಹಳೆಯ ಆಗಿವೆ. ಗೋಪುರ ಪಾದಗಳು ಬಿದ್ದು ಹೋಗುವ
ಹಂತದಲ್ಲಿವೆ. ಇದು ಬಹಳ ಹಳೆಯ ಕಾಲದ ಗೋಪುರಗಳು.
ನೋಡಲು ಚೆನ್ನಾಗಿವೆ. ರಥ ಕಲ್ಲಿನ. ಇವುಗಳನ್ನು ನೋಡಿ
ನಮಗೆ ಸಂತೋಷ ಆಯಿತು.
ನಾವು ಹಂಪಿಯ ವಿರೂಪಾಕ್ಷ ದೇವಸ್ಥಾನಕ್ಕೆ ಬಂದಾಗ ಸಂಜೆ
5:30 ಗಂಟೆ ಆಗಿತ್ತು. ಆ ವಿರೂಪಾಕ್ಷ ದೇವಾಲಯದ
ಗೋಪುರ ಹಳೆಯ ಆಕಾರದ ಇದು ಬಿದ್ದು ಹೋಗುತ್ತಿದೆ ಇದನ್ನು
ಸರಿಪಡಿಸಿದ್ದರು.



ಆನೆ.
ನಾವು ಆ
ದೇವಾಲಯದಲ್ಲಿ
ಕಾಣಿಸಿದ
ಪ್ರಾಣಿ.







ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಧರ್ಮಾದಾಯ ದತ್ತಿಗಳ ಇಲಾಖೆ
ಹಂಪಿ ನಕ್ಷೆ

ವಿಠ್ಠಲ ದೇವಾಲಯ:-

ಹಂಪಿಯ ಅತ್ಯಂತ ಪ್ರಸಿದ್ಧ ದೇವಾಲಯವಾದ ವಿಠ್ಠಲ ದೇವಾಲಯವು [illegible] ಶ 7 ನೇ ಶತಮಾನದಲ್ಲಿ [illegible] ದೇವಾಲಯವಾಗಿದೆ. ಆರಂಭದಲ್ಲಿ [illegible] ಈ ದೇವಾಲಯದ [illegible] ಕಾಲದಲ್ಲಿ [illegible] ಕೃಷ್ಣ ದೇವರಾಯನ ಕಾಲದಲ್ಲಿ 1510 ರಲ್ಲಿ [illegible] ದೇವಾಲಯದ ಮೇಲೆ [illegible] ಗೋಪುರಗಳು, [illegible] [illegible] ಗೋಪುರದ [illegible] [illegible].

- ದೇವಾಲಯದ ಮುಂದೆ [illegible] ಕಲ್ಲಿನ ರಥ [illegible]. [illegible] ಗೋಪುರದ [illegible] [illegible] ಸಂಗೀತ [illegible].

ನಾವು ರಾತ್ರಿ ಊಟ ಮುಗಿಸಿಕೊಂಡು ನಮ್ಮ ಪಯಣ ಹೊಸಪೇಟೆಯ ಕಡೆ ಸಾಗಿತು. ನಾವು 7:00 ಗಂಟೆಗೆ ಹೊಸಪೇಟೆಗೆ ತಲುಪುತ್ತೇವೆ. ಕತ್ತಲಾಗಿದ್ದ ಕಾರಣ ಇಲ್ಲಿ ಅಂದು ನಾವು ಬೇರೆ ಕಡೆ ಹೋಗಲು ಆಗುವುದಿಲ್ಲ. ನಮ್ಮ ಮೇಷ್ಟ್ರು ನಾಯಕರು ಸ್ವತಃ ಊರು ನಮ್ಮೆಲ್ಲರನ್ನು ಒಳ್ಳೆಯ ಸ್ಥಳ ತೋರಿಸಿಕೊಟ್ಟರು.
ನಾವು ತುಂಗಭದ್ರಾ ಜಲಾಶಯಕ್ಕೆ ನೋಡಲು ಹೋಗುತ್ತೇವೆ.




ನಾವು ಬ್ಯಾಗಡೆ ಹೋದಾಗ ಸಂಗೀತ ಕಾರಂಜಿ ನೋಡಲು ಬರದು ತಿಳಿಯಿತು. ಈ ಸಂಗೀತ ಕಾರಂಜಿ ನೋಡಲು 1 ರಿಂದ 2 km ನಡೆದುಕೊಂಡು ಬಂದೆವು. ನಾವು ಕಾರಂಜಿ ನೋಡಿದ ನಂತರ ನಾವೆಲ್ಲ ಗಾರ್ಡನಲ್ಲಿ ಸುತ್ತಾಡುತ್ತ ಕುಳಿತುಕೊಂಡು. ನಮ್ಮ ಸರ್ ಇವತ್ತಿನ ಅಂತ್ಯ ಪ್ರವಾಸದ ನೆನಪುಗಳನ್ನು ಹೇಳಿದರು ಹಾಗೆ ಇಲ್ಲಿ ಅಂದು ಎಲ್ಲರೂ ಕೇಳುತ್ತಾರೆ. ಎಲ್ಲರೂ ಬೇರೆ ಇದ್ದರಿಂದ ಕೇಳುತ್ತಾರೆ. ಎಲ್ಲರೂ ನಮ್ಮ ಅನುಭವ ಹೇಳಿದರ ಮೇಲೆ ನಾವು ನಡೆದುಕೊಂಡು ಬರುವಾಗ ನಮ್ಮ ದಣಿವು ಸರ್ ಅವರ ಬೇರೆ ನಮ್ಮನ್ನೆಲ್ಲರನ್ನು ತಮ್ಮ ಬಸ್ ಪ್ರಯಾಣ ಮಾಡಿಸುತ್ತಾರೆ. ಆದ ನಂತರ ನಾವು ಬಸ್ಸಿನ ಕಡೆ ನಡೆದುಕೊಂಡು ಹೋಗಿ ಬರುತ್ತೇವೆ. ಬೇಗ ರಾತ್ರಿ ಬಸ್ಸಿನಲ್ಲಿ ಇದ್ದ ಕಾರಣ ನಾವು ಎಲ್ಲರೂ ಗಾರ್ಡನ್ನಲ್ಲಿ ಎಲ್ಲರೂ ಕುಳಿತುಕೊಂಡು ನಾವು ಊಟ ಮಾಡುತ್ತೇವೆ. ಎಲ್ಲರೂ ಊಟದ ನಂತರ ನಮ್ಮ ಬಸ್ಸು ಶಾಲೆಯ ಕಡೆ ಪಯಣ ಸಾಗಿತು.

ನಾವು ಹೊರಟೆವು ರಾತ್ರಿ 9:30 ಕ್ಕೆ ಬಸ್ಸಿಗೆ ಬಸ್ಸು
ನಮ್ಮ ಊರಿನ ಶಾಲೆಯಿಂದ 12 ಕಿಲೋಮೀಟರ್ ಬೆಳಗಾವಿ
ಸಂಜೆ ಸಮಯದಲ್ಲಿ 11:35 ಗಂಟೆ ಕ್ಕೆ ಬಂದರು.
ಅಲ್ಲಿಂದ ಎಲ್ಲರೂ ಅವರ ಅವರ ಮನೆಗೆ ಊರಿಗೆ
ಹೋದರು.



# Wellcome

# to

# Culture Jamboree

# V.M.K.S.R Vastrad COLLEGE HUNAGUND

ame :- Lingamma. B. Kolkar

lass :- BA - III Sem

oll No :- 53

ubject :- Scout and Guides

ubmitted To :- S. R. Nagannavar

# INTERNATIONAL CULTURAL JAMBOREE 2022 REPORT

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್' ಅಂತರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ 2022' ಡಿಸೆಂಬರ್ 27ರ ವರದಿಯ ಕುರಿತು.


ಪೀಠಿಕೆ:- ಬಿ. ಎಮ್. ಕೆ. ಎಸ್. ಆರ್. ಪದವಿ ಕಾಲೇಜು ಹುನಗುಂದ ಕಾಲೇಜು ವತಿಯಿಂದ ರೋವರ್ ನಾಯಕರಾದ ಎಸ್. ಆರ್. ನಾಗಲ್ಲೂರ ಸರ್ ಮತ್ತು ನಾಯಕಿಯರಾದ ಎಸ್. ಬಿ. ಅಮಲಿಹಾಳ ಮೇಡಮ್ ಅವರೊಂದಿಗೆ ಆರು ಜನ ರೋವರ್ ಮತ್ತು ಆರು ಜನ ರೇಂಜರ್ಸ್‌ಗಳು ಹೋಗಿದ್ದೆವು 20/12/22 ಬೆಳಗ್ಗೆ 8 ಗಂಟೆಗೆ ಹುನಗುಂದ ಬಸ್ ಸ್ಟ್ಯಾಂಡ್ ನಿಂದ ಮೂರು ಕಾಲೇಜಿನ ರೋವರ್ಸ್ ರೇಂಜರ್ಸ್ ಮತ್ತು ನಾಯಕ ನಾಯಕಿಯರೊಂದಿಗೆ ಪ್ರಯಾಣ ಮಾಡಿದ್ದೇವು, ರಾತ್ರಿ 12 ಅಥವಾ 1 ರ ಸುಮಾರಿಗೆ ಮೂಡಬಿದರೆ ತಲುಪಿದೆವು ಈ ಸಾಂಸ್ಕೃತಿಕ ಜಾಂಬೂರಿಯು ಇದೇ ಮೊದಲ ಬಾರಿಗೆ ಭಾರತದಲ್ಲಿ ನಡೆದಿರುವುದು ನಮಗೆ ಹೆಮ್ಮೆಯ ವಿಷಯ ಎನ್ನಬಹುದಾಗಿದೆ. ಇದರಲ್ಲಿ ನಾವು ಭಾಗವಹಿಸಿದ್ದು ನಮ್ಮ ಹೆಮ್ಮೆಯ ವಿಷಯ,

ವಿಷಯ ವಿಶ್ಲೇಷಣೆ:- ಬೆಳಗ್ಗೆ 21 ನೇ ತಾರೀಖಿನಂದು ನಾವು ಬೆಳಗ್ಗೆ ಬೇಗನೇ ಎದ್ದು ಮೂಡುಬಿದರೆಯ ಇಂಗ್ಲೀಷ್ ಮಾಧ್ಯಮದ ಶಾಲೆಗೆ ಹೋಗಿ ಅಲ್ಲಿ ಎಲ್ಲರಿಗೂ ದೊರೆಯಬಹುದಾದ ಕಿಟ್ಸ್‌ನ್ನು ತೆಗೆದುಕೊಂಡು ಬಂದೆವು ನಂತರ ಊಟಕ್ಕೆ ಹೋದೆವು ಅಲ್ಲಿ ವಿವಿಧ ಬಗೆಯ ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದು ನಾವು ಆಹಾರವನ್ನು ಸೇವಿಸಿದೆವು ಅಲ್ಲಿ ಎಲ್ಲಾ ಬಗೆಯ ಆಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು, ಅಲ್ಲಿನ ಜನಸಂಖ್ಯೆ 50,000 ಕ್ಕಿಂತ ಹೆಚ್ಚಿತ್ತು ಅಥವಾ ಅದಕ್ಕೂ ಮೀರಿತ್ತು ಎನ್ನಬಹುದು ಅಲ್ಲಿ ಎಲ್ಲಾ ಬಗೆಯ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು ಅಲ್ಲಿ ಬಗೆಯ ವ್ಯವಸ್ಥೆಯನ್ನು ಆನಂದದಾಯಕವಾಗಿತ್ತು ನಾವು ಅಲ್ಲಿಯ ವಾತಾವರಣ ಬಹಳ ತಂಪು ಎನ್ನಬಹುದು, ಮತ್ತೆ ಮುಂದೆ ಬೆಳಗ್ಗೆ ಹತ್ತು ಕಾರ್ಯಕ್ರಮ ಶುರುವಾಗಿತ್ತು ಅಲ್ಲಿನ ವರದಿ ಈ ಸಾಂಸ್ಕೃತಿಕ ಕಾರ್ಯಕ್ರಮವು ಶುರುವಾಗಿತ್ತು ಎನ್ನಬಹುದು ಸಾಂಸ್ಕೃತಿಕ ಕಾರ್ಯಕ್ರಮವು ಬಹಳ ಅದ್ಭುತವಾಗಿ ನಡೆಯುತ್ತಿತ್ತು ಅಲ್ಲಿನ ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದರೆಯಲ್ಲಿ ಏರ್ಪಡಿಸಲಾಗಿತ್ತು.

ಈ ಶಿಬಿರಂಭವನ್ನು ಕರ್ನಾಟಕದ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟರವರು ಉದ್ಘಾಟನೆ ಮಾಡಿದರು ಮತ್ತು ಈ ಸಂದರ್ಭ ಜಾಂಬೂರಿ ಕಾರ್ಯಕ್ರಮದಲ್ಲಿ ನಳಿನ್ ಕುಮಾರ್ ಕಟೀಲ್, ವೀರೇಂದ್ರ ಹೆಗಡೆ, ರಾಜ್ಯ ಸ್ಕೌಟ್ ಮತ್ತು ಗೈಡ್ಸ್‌ನ ಕಮೀಷನರ್‌ಗಳಾದ ಪಿ. ಜಿ. ಆರ್ ಸಿಂಧ್ಯ ಮತ್ತು ಆಳ್ವಾಸ್ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಮೋಹನ ಆಳ್ವರವರು ಉಪಸ್ಥಿತರಿದ್ದರು. ಈ ಉದ್ಘಾಟನೆಯ ನಂತರ ಹಲವಾರು ಸಾಂಸ್ಕೃತಿಕ ತಂಡಗಳ ಪಥ ಸಂಚಲನವಾಯಿತು.

ಜಾಂಬೂರಿ ಪ್ರಮುಖ ವೇದಿಕೆಯಿರುವ ಬಂಡಾಲು ರಂಗ ಮಂಟಪದಲ್ಲಿ ಏಕಕಾಲಕ್ಕೆ 50 ಸಾವಿರ ಜನರು ಕೂರುವ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಇಲ್ಲಿ ಪ್ರಮುಖ ಕಾರ್ಯಕ್ರಮಗಳು ನಡೆಯುತ್ತಿದ್ದವು, ಖ್ಯಾತ ಗಾಯಕರಾದ ಶಂಕರ್ ಮಹಾದೇವನ್, ವಿಜಯ್ ಪ್ರಕಾಶ್ ಸಂಗೀತ ಸಂಜೆ ನಡೆದಿತ್ತು. ನಾಲ್ಕು ಬಾರಿ ಪ್ರದರ್ಶನದಲ್ಲಿ ಹಾಡಿದ ಅವರನ್ನು ನಿಜಕ್ಕೂ ಕಣ್ಣಾರೆ ಕಂಡಿದ್ದು ಅವಿಸ್ಮರಣೀಯ ಎನ್ನಬಹುದು.

ಇಡೀ ಜಾಂಬೂರಿಯ ಅಂದಾಜು ವೆಚ್ಚ 35 ಕೋಟಿಗೆ ಬಂದು ತಲುಪಬಹುದು, ಒಟ್ಟು ಮೊದಲ ಬಾರಿಗೆ ಸಾಂಸ್ಕೃತಿಕ ಜಾಂಬೂರಿಗೆ ಸಾರ್ವಜನಿಕರಿಗೂ ಮುಕ್ತ ಅವಕಾಶ ನೀಡಿದ್ದಾರೆ ಇದೇ ಬೇರೆ ಕಡೆ ಆದರೆ ನಮಗೆ ನೋಡಲು ಸಿಗುತ್ತಿರಲಿಲ್ಲ. ನಿತ್ಯವು 2 ಲಕ್ಷ ಜನರಿಗೆ ಬೇಕಾದ ಊಟೋಪಚಾರದ ವ್ಯವಸ್ಥೆಯನ್ನು ಮಾಡಿದ್ದರು. ಆಳ್ವಾಸ್ ವಿದ್ಯಾಗಿರಿ ಕ್ಯಾಂಪಸ್‌ನಲ್ಲಿ ಸಾಂಸ್ಕೃತಿಕ ಜಾಂಬೂರಿಗೆ ಸಕಲ ಸಿದ್ಧತೆಯನ್ನು ಮಾಡಿದ್ದರು. ಜಾಂಬೂರಿಯಲ್ಲಿ ಕೃಷಿ, ವಿಜ್ಞಾನ, ಆಹಾರ, ವಸ್ತ್ರ ಹಾಗೂ ಸ್ವದೇಶಿ ಮೇಳಗಳು ಏರ್ಪಡಿಸಿದ್ದರು, ಇವುಗಳೆಲ್ಲ ಕಲಾವಿದ್ಯೆಯ ಕೈಗನ್ನಡಿಯಂತಿವೆ,



ಕೃಷಿ ಮೇಳಕ್ಕೆ ಸಂಬಂಧಿಸಿದಂತೆ ಅಲ್ಲಿ ವಿವಿಧ ತೆರನಾದ
ಗಳನ್ನು, ತರಕಾರಿಗಳನ್ನು ಬೆಳೆಸಿದ್ದರು. ಅವುಗಳು ತುಂಬಾ ಸುಂದ
ವಾಗಿದ್ದವು ಅಲ್ಲಿನ ವಾತಾವರಣಕ್ಕೆ ಶೋಭೆಯನ್ನುಂಟು ಮಾಡು-
ತ್ತಿದ್ದವು ಮತ್ತು ಹಲವು ರೀತಿಯ ತರಕಾರಿಗಳ ಬೀಜಗಳು, ಹೂಗಳ
ಡಗಳು, ತರತರಹದ ಸಸಿಗಳು ನೋಡಲಿಕ್ಕೆ ಎರಡು ಕಣ್ಣು
ಲದು ಎಂಬಂತಿದ್ದವು ಅಲ್ಲಿ ಲಕ್ಷಾನುಗಟ್ಟಲೇ ಜನರ
ಕ್ಷಣೆಯಿತ್ತು ವಿದ್ಯಾರ್ಥಿಗಳ ವೀಕ್ಷಣೆಯು ಇತ್ತು ಅಲ್ಲಿನ
ಚಿತ್ರಗಳ ಸೆರೆ ಇದೆ ಎನ್ನಬಹುದು.




ನಮ್ಮ ಬಾಗಲಕೋಟೆ ಜಿಲ್ಲೆಯ ಪ್ರದರ್ಶನದಲ್ಲಿ ದೊರೆತ ನೆನಪಿನ ಚಿತ್ರಣದ ನೋಟ ಇದು ಪ್ರದರ್ಶನ ಮಳಿಗೆಗಳಲ್ಲಿ ಕಾಣಸಿಗುವ



ಆಹಾರ ಮೇಳಕ್ಕೆ ಸಂಬಂಧಿಸಿದಂತೆ ಅಲ್ಲಿ ವಿವಿಧ ತರನಾದ ಆಹಾರ ತಿಂಡಿ ಮಳಿಗೆಗಳು, ಅದರಂತೆ ಹಾಗೆ ಕಾಣುವ ಕಾಡು ಗಾಢದ ಜೊತೆಗೆ ಹಾಗೂ ವಿವಿಧ ತರನಾದ ತೆಂಗು ಹಾಗೂ ಬಾಳೆಹಣ್ಣುಗಳು ಬಾಳೆ ಹಣ್ಣು ಒಂದೇ ತೆಗೆದುಕೊಂಡರೆ ಅದರ ತುಂಬಾ ವಿಧದ ಹಣ್ಣು ಸಿಕ್ಕವು ಹಾಗೆ ತ್ರಿಕೋನದಲ್ಲಿಯೂ ವಿವಿಧ ರೀತಿಯಾದ ಪಕ್ಷಿಗಳನ್ನು ಅಲ್ಲಿ ಪ್ರದರ್ಶಿಸಿದ್ದರು.





ವಿವಿಧ ಚಿತ್ರಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು



ಇಲ್ಲಿ ವಿವಿಧ ತರಹದ ಪ್ರಾಣಿಗಳ ಪ್ರತಿಮೆಗಳಿದ್ದವು ಅವುಗಳು
ರದಿಂದ ನೋಡಿದಾಗ ನಿಜವಾದ ಪ್ರಾಣಿಗಳೇನೋ ಎಂಬಂತೆ
ವಾಗುತ್ತಿತ್ತು ನಿಜವಾಗಿಯೂ ತಿಳಿದದ್ದು ಅವರ ಸಮೀಪದ
ಗಿ ಪರಿಶೀಲಿಸಿದಾಗಲೇ ತಿಳಿದದ್ದು ಅದು ನಿಜವಲ್ಲದ ಪ್ರಾಣಿಯ
ಒಂದು ಶಿಲೆಯ ಪೇಂಟಿಂಗ್ ಎಂದು ಗೊತ್ತಾದದ್ದು.

ಇಲ್ಲಿ ಹತ್ತಿಗಾಗಿನ ವಿವಿಧ ರೀತಿಗಳು ಕಂಡುಬರುತ್ತಿದ್ದವು
ಧ ಆಕೃತಿಯಂತೆ ವಸ್ತುಗಳು ಇಲ್ಲಿ ಕಂಡುಬರುತ್ತಿದ್ದವು





ಶರೀರದ ದೇಹದಲ್ಲಿ ಶರೀರದ ಮನಸ್ಸಿರುತ್ತದೆ ಎಂಬಂತೆ ಆರೋಗ್ಯ
ವನ್ನು ಕಾಪಾಡಿಕೊಳ್ಳಲು ಯೋಗ ಮುಖ್ಯವೆಂಬಂತೆ ಇಂದು ಜೂನ್
, 35 ಕ್ಕೆ ಯೋಗವನ್ನು ನಮ್ಮ ಮಹಿಳೆಯರ ವಸತಿಗೃಹ-
ದ ಹೇಮಾವತಿ ಹಾಸ್ಟೆಲ್‌ನಲ್ಲಿ ಯೋಗವನ್ನು ಮಾಡಿದ ಕಿರು-
ಚಿತ್ರ ಇದಾಗಿದೆ.



ಯುವಜನರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ
ಸದಸ್ಯರು ಮತ್ತು ನಮ್ಮ ಸಂಚಾಲಕರ ಚಿತ್ರ ಹೇಮಾವತಿ ಹಾಸ್ಟೆಲ್
ಮುಂಭಾಗದಲ್ಲಿರುವ ಚಿತ್ರ.

## ಸಾಂಸ್ಕೃತಿಕ ಕಾರ್ಯಕ್ರಮ, ಸಾಹಸ ಪ್ರದರ್ಶನ

ಅಂತರಾಷ್ಟ್ರೀಯ ಜಾಂಬೂರಿಯಲ್ಲಿ 42 ಸಾಹಸ ಕಲೆಗಳು ಪ್ರದರ್ಶನಗೊಂಡಿದ್ದವು. ಇವೆಲ್ಲದರಂತೆ ಆವರಣದಲ್ಲಿ ಹತ್ತು ವೇದಿಕೆಗಳಲ್ಲಿ ವಿವಿಧ ಕಾರ್ಯಕ್ರಮಗಳು ನಡೆದವು, ಪ್ರತಿದಿನ ಸಂಜೆ 5-8.30 ರವರೆಗೆ ಸಾಂಸ್ಕೃತಿಕ ಕಲಾ ಪ್ರದರ್ಶನ ಇರುತ್ತಿತ್ತು. ರೋಮಾಂಚಕ ಕಲೆಗಳ ಪ್ರದರ್ಶನಕ್ಕೆ ಅಲ್ಲಿ ಆದ್ಯತೆ ಇತ್ತು.

ಮಂಗಳೂರು : ನುಡಿಸಿರಿ, ವಿರಾಸತ್ ಮೂಲಕ ಸದ್ದು ಮಾಡುತ್ತಿದ್ದ ಆಳ್ವಾಸ್ ಈ ಬಾರಿ ಅಂತರಾಷ್ಟ್ರೀಯ ಸ್ಕೌಟ್ಸ್ ಗೈಡ್ಸ್ ಸಾಂಸ್ಕೃತಿಕ ಜಾಂಬೂರಿಗೆ ಸಜ್ಜಾಗಿದ್ದು, ಆಳ್ವಾಸ್ ವಿದ್ಯಾಸಂಸ್ಥೆಯ ವಿದ್ಯಾಗಿರಿ ಕ್ಯಾಂಪಸ್ ಅಂತರಾಷ್ಟ್ರೀಯ ಸ್ಕೌಟ್ಸ್ ಗೈಡ್ಸ್ ಸಾಂಸ್ಕೃತಿಕ ಜಾಂಬೂರಿಗೆ ವೇದಿಕೆಯಾಗಿತ್ತು.

ಉಪಸಂಹಾರ:- ಅಂತರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯು ಇದೇ ಮೊದಲನೇ ಬಾರಿಗೆ ಕರ್ನಾಟಕದಲ್ಲಿ ನಡೆದಿದೆ. ಇದು ವಿದ್ಯಾರ್ಥಿಗಳ ಸ್ವಾವಲಂಬನೆಯನ್ನು ನೀಡಿದೆ ಸರ್ವ ಅವಕಾಶಗಳನ್ನು ಒದಗಿಸಿಕೊಟ್ಟಿದೆ ಎನ್ನಬಹುದು.